# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

॥धर्मो रक्षति रक्षितः॥

Vol. 33 No. 08 JUNE 2024 Pages 16 Rs. 2/-



**FORTHCOMING EVENT :**

**WOMEN CONVENTION** on Sunday, 16th June 2024 at Havyakara Sabhagraha, Dipti Solitaire, Ghatkopar (W), Mumbai

**YAKSHAGANA** - Daksha Yajna & Shri Rama Darshana on Sunday, 28th July, 2024 at Mehta Auditorium, Airoli

*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

**"Havyaka Sandesha"** is a monthly publication by **HAVYAKA WELFARE TRUST, Mumbai**
B-207, Valmiki Apartment, Sundar Nagar, Kalina, Vidyanagari P. O. Mumbai - 400 098.

| | | |
|---|---|---|
| **Hon. Editor** | : | Smt. Amita S. Bhagwat |
| **Editorial Committee** | | Smt. Shashikala Hegde<br>Smt. Tanuja Hegde<br>Shri Ganesh Bhat<br>Smt. Shailaja Hegde |
| **Publisher** | : | Vasant Bhat |
| **Printed at** | : | M/s. Navin Printers<br>Mumbai - 400 016.<br>✆ 2430 8316 |


**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2023-2024**

| | | |
|---|---|---|
| ***President*** | : | Shivkumar P. Bhagwat |
| ***Vice - President*** | : | Vishnu Bhagwat |
| ***Hon. Gen. Secretary*** | : | Vasant Bhat |
| ***Hon. Jt. Secretary*** | : | G. V. Hegde |
| ***Hon. Treasurer*** | : | Ganesh Bhat |

***Elected Members :***

| | |
|---|---|
| Narayan Akadas | Umesh Hegde |
| Sanjay Bhat | Prakash Bhat |
| Smt. Tanuja Hegde | Prakash Hegde |
| Smt. Shashikala Hegde | N. K. Hegde |
| Ramana Bhat | |

***Co-opted Members :***

Chandrashekhar Joshi, Nagaraj Bhat

***Editorial***

# *Not sitting idle*



*'One should not sit idle'. We have all grown up listening to this saying and were motivated to work hard and to make the best use of the time we had.*

*To be idle is not the same thing as sitting idle. True, A standing person suggests that he or she is working or in a hurry and we feel one can relax only while sitting or sleeping. At the same time just because someone is sitting, we can't presume he is idle as contemplation of work may require sitting at one place. On the other hand, one may be moving around throughout the day, not doing anything constructive or useful, we cannot call him active either.*

*Perhaps this saying was phrased when work involved physical exertion. One had to necessarily move out of the house to earn his livelihood. Today, with the bloom of software, workplace means having a laptop and highspeed internet connection. Being at Home no longer means sitting at home leisurely, it could be 'Work from Home' which is an accepted mode of work throughout the world.*

*Technology has truly revolutionized the field of communication. Earlier when we communicated with someone, we had to necessarily meet them and we not only heard their voice but also saw the shine in the eyes. Body language added to what we spoke. When we were writing and receiving letters, the person's handwriting brought personal touch. There were days when we were longing to hear the footsteps of the postman.*

*The advent of telephone made our life easy and having a television was a utopia. Now, smart phones have made us so independent that we feel that the whole world is in our palm. In reality, we have contact, but we are not in touch. We don't even take the trouble of calling others and only exchange messages. We use emojis to express our emotions which reminds stone age days when people used sign language. We laugh alone, we cry alone. Addiction to Mobile is so common that we are not interested in going to a place not having network and many have also developed the phobia of losing their mobile. While we marvel at the development we forget to notice the simple joys of life evaporating.*

*In this competitive age, working for long hours means sitting for a long time, continuously staring at computer with hands on the keyboard. Stationed at one place, they may be connected to clients in foreign lands. Transactions take place very quickly and we feel the world is moving very fast. At the same time, we are discussing about the adverse effect of sitting for a long time which may lead to health problems. Hence there is a need to take a break from time to time.*

Amita S Bhagwat

e-mail : amitabhagwat@gmail.com

*PAGE DONATED BY :* ***SHRI VINAY & SHRI SANJAY BHAT IN MEMORY OF LATE SMT. GIRIJA & LATE SHRI R. S. BHAT***

# ಸವಿ ನೆನಪು

✍ ಅನಸೂಯಾ ಭಟ್



ಅವಳು ಯಶೋದಾ, 20 ವರ್ಷ ತುಂಬಿದ ತರುಣಿ. ಆಗಲೇ ಪುಟ್ಟ ಮಗುವಿನ ತಾಯಿ. ಅವಳಿರುವುದು ಸಿರ್ಸಿಯಲ್ಲಿ, ಅವಳ ತವರು ಮನೆಯೂ ಸಿರ್ಸಿಯೇ. ಅವಳೀಗ ಕಡತೋಕಕ್ಕೆ ಗಂಡನ ಮನೆಗೆ ಬಂದಿದ್ದಾಳೆ. ಅತ್ತೆ, ಮಾವ, ಚಿಕ್ಕತ್ತೆ, ಅಕ್ಕ, ಭಾವ ಎಲ್ಲರೂ ಇರುವ ಮೂರು ಅಂತಸ್ತಿನ ದೊಡ್ಡದಾದ ಮನೆ ಅದು. ಅವಳಿಗದು ಅಡವಿಯ ಮಧ್ಯದಲ್ಲಿ ಇರುವ ಅರಮನೆ. ಅವಳಿಗೆ ಬೆಟ್ಟ, ಗುಡ್ಡ, ದೊಡ್ಡ ದೊಡ್ಡ ಮರಗಳು, ಹಕ್ಕಿಗಳ ಚಿಲಿಪಿಲಿ ಹೀಗೆ ನಿಸರ್ಗ ಸೌದರ್ಯವೆಂದರೆ ಪರಮ ಪ್ರೀತಿ. ಅವಳ ಮನೆಯ ಮುಂದೆ ದೊಡ್ಡದಾದ ಅಂಗಳ. ಅಲ್ಲಿ ಬಗೆ ಬಗೆಯ ಹೂ ಗಿಡಗಳು ಅಂಗಳದ ತುದಿಯಿಂದ ಹತ್ತಾರು ಮೆಟ್ಟಲು ಇಳಿದು ಹೋದರೆ ಮನೆಯ ತೋಟ ಪ್ರಾರಂಭವಾಗುತ್ತದೆ.

ತೋಟವೆಂದರೆ 8-10 ಎಕರೆಯಷ್ಟು ವಿಸ್ತಾರವಾದದ್ದು. ಹಸಿರನ್ನೇ ಹಾಸಿ ಹೊದ್ದಂತೆ ಕಾಣುವ ಸುಂದರವಾದ ತೋಟ. ಅಲ್ಲಿ ಅಡಿಕೆ, ತೆಂಗು, ಬಾಳೆಗಿಡಗಳಲ್ಲದೇ ತೋಟದ ಅಂಚಿಗೆ ಮಾವು, ಪೇರಲ, ಚಿಕ್ಕು, ಜಾಯಿಕಾಯಿ ಮರಗಳು ಕಂಗೊಳಿಸುತ್ತಿದ್ದವು. ತೋಟ ಇಳಿದೊಡನೆಯೇ ಸರಿಯಾಗಿ ಕಾಲು ಹಾದಿಯಲ್ಲೇ ಹೋಗಬೇಕು. ಸ್ವಲ್ಪ ಅಡ್ಡ ದಿಡ್ಡ ಹೋದಳೋ ಅವಳಿಗೆ ಮನೆಗೆ ಬರುವುದು ಹೇಗೆಂದು ತಿಳಿಯುತ್ತಿರಲಿಲ್ಲ. ಅವಳಿಗೆ ಕಾಲು ಹಾದಿಯಲ್ಲಿ ಓಡೋಡುತ್ತ ಹೋಗುವುದೆಂದರೆ ತುಂಬಾ ಪ್ರೀತಿ. ಅವಳು ಹೋಗುವುದೂ ಹಾಗೆಯೇ. ಅಲ್ಲಿ ಯಾವಾಗಲೂ ಆಳುಕಾಳುಗಳು ಓಡಾಡುತ್ತಲೇ ಇರುತ್ತಿದ್ದರು. ಅವರು ಯಾರಾದರೂ ನೋಡಿದರೆ ''ಯಶೋದಮ್ಮ ಸಾವಕಾಶ ಹೋಗಿ'' ಎಂದು ಎಚ್ಚರಿಸುತ್ತಿದ್ದರು.

ಯಶೋದಾಳ ಮಾವನವರಿಗೆ ಅವಳು ಒಬ್ಬಳೇ ತೋಟಕ್ಕೆ ಹೋಗುವುದು ಹಿಡಿಸುತ್ತಿರಲಿಲ್ಲ. "ಯಶೋದಾ ನೀನು ಒಬ್ಬಳೇ ತೋಟಕ್ಕೆ ಹೋಗಕೂಡದು'' ಎಂದು ಅವಳಿಗೆ ತಾಕೀತು ಮಾಡಿದ್ದರು. ಅವರ ಆಜ್ಞೆಯನ್ನು ಮನೆಯಲ್ಲಿ ಯಾರೂ ಮೀರುವಂತಿರಲಿಲ್ಲ. ಆಗ ಯಶೋದಾಳ ಅಕ್ಕ ಅವಳಿಗೊಂದು ಉಪಾಯವನ್ನು ಹುಡುಕಿಕೊಟ್ಟಳು. 'ಮನೆಯ ಹಿಂಬದಿಯ ಕೊಟ್ಟಿಗೆಯನ್ನು ದಾಟಿ ತೋಟಕ್ಕೆ ಇಳಿದು ಹೋದರೆ ಅದು ಮಾವನವರಿಗೆ ಕಾಣುವುದಿಲ್ಲ. ನೀನು ಮಗು ಮಲಗಿದ್ದಾಗ ಬೇಗ ಹೋಗಿ, ಬೇಗ ಬಂದು ಬಿಡು. ಮಗು ಎದ್ದರೆ ನಾನು ನೋಡಿಕೊಳ್ಳುವೆ' ಎಂದು ಅಭಯ ನೀಡಿದಳು. ಯಶೋದಾ ಸಹ ಹಾಗೆಯೇ ಮಾಡುತ್ತಿದ್ದಳು.

ತೋಟದ ಆ ತುದಿಯಲ್ಲಿ ಸ್ವಲ್ಪ ಎತ್ತರವಾದ ಜಾಗದಲ್ಲಿ ಒಂದು ಪುಟ್ಟ ಮನೆ ಇತ್ತು. ಅದಕ್ಕೆ ಮಾಳಿಗೆಯೂ ಇದೆ. ಅದಕ್ಕೆ 'ಆಚೆದಿಂಬ' ಎಂದು ಕರೆಯುತ್ತಿದ್ದರು. ಅಲ್ಲಿ ಯಶೋದಾಳ ಯಜಮಾನರು ಕುಳಿತು ಓದುತ್ತಲೋ, ಬರೆಯುತ್ತಲೋ, ಪ್ರಶ್ನೆ ಪತ್ರಿಕೆಯನ್ನು ನೋಡುತ್ತಲೋ ಇರುತ್ತಿದ್ದರು. ಇವಳು ಸರಸರನೇ ಮೆಟ್ಟಲೇರಿ ಸಾವಕಾಶವಾಗಿ ಎದುರಿಗೆ ಹೋಗಿ ನಿಲ್ಲುತ್ತಿದ್ದಳು. "ಅರೆ ಒಬ್ಬಳೇ ಬಂದೆಯಾ?" ಎನ್ನುತ್ತಿದ್ದರು ಅವರು, ಆಗ ಅವರಿಗೆ ಯಶೋದಾ ಸ್ಟುಡೆಂಟ್‌ನಂತೆ ಕಾಣುತ್ತಿದ್ದಳು. ಆ ಪುಸ್ತಕವನ್ನು ತೆಗೆದುಕೊಂಡು ಬಾ, ಇದನ್ನು ಅಲ್ಲಿ ಇಡು, ಕೆಂಪು ಇಂಕಿನ ಪೆನ್ನನ್ನು ಕೊಡು. ನಾನು ಹೇಳುವುದನ್ನು ನೀಟಾಗಿ ಬರೆದುಕೊಡು. ಹೀಗೆ ಅವಳಿಗೆ ಮುಗಿಯದಷ್ಟು ಕೆಲಸ ಕೊಡುತ್ತಿದ್ದರು. ಆಗ ಅವಳು ಮಗುವಿನ ನೆವ ಹಾಕಿ ಹಿಂತಿರುಗಿ ಓಡೋಡಿ ಬಂದು ಹಿಂಬದಿಯಿಂದ ಮನೆಯನ್ನು ಸೇರಿಕೊಳ್ಳುತ್ತಿದ್ದಳು.

ಹೀಗೆಯೇ ಒಂದು ದಿನ ಯಶೋದಾ ಓಡೋಡುತ್ತ ಬರುತ್ತಿರುವಾಗ ಎದುರಿಗೆ ಒಂದು ದೊಡ್ಡದಾದ ನಾಗರ ಹಾವು ಹೆಡೆಯೆತ್ತಿ ನಿಂತಿತ್ತು. ಅದನ್ನು ನೋಡಿ ಇವಳ ಜಂಘಾಬಲವೇ ಹುದುಗಿ ಹೋಯಿತು. ಹೆದರಿಕೆಯಿಂದ ಒಂದು ನಿಮಿಷ ಸ್ತಬ್ಧಳಾಗಿ ನಿಂತು ಬಿಟ್ಟಳು. ಕೂಗಲೂ ಸಹ ಸ್ವರ ಏಳಲಿಲ್ಲ. ಬಹುಶಃ ಇವಳ ಕಾಲಿನ ಸಪ್ಪಳಕ್ಕೆ ಹಾವು ಹೆಡೆ ಎತ್ತಿರಬಹುದು. ಇವಳು ಸಾವಕಾಶವಾಗಿ ಒಂದೊಂದೆ ಹೆಜ್ಜೆಯನ್ನು ಹಿಂದಿಡುತ್ತಾ ಬಂದಳು. ಆ ಹಾವು ಸಹ ಮುಂದಕ್ಕೆ ಹರಿದು ಹೋಯಿತು. ಯಶೋದಾ ಸಹ ಹಾವಿಗೆ ಹೆದರಿ ಕಾಲ ಬುಡವನ್ನು ನೋಡುತ್ತ ಬೇಗ ಬೇಗನೇ ನಡೆದು ಮನೆ ಸೇರಿಕೊಂಡಳು. ಯಶೋದಾಳಿಗೆ ಆ ದಿನವಿಡೀ ಅಕ್ಕನ ಹತ್ತಿರ ಹಾವಿನ ಸುದ್ದಿಯನ್ನು ಹೇಳಿದ್ದೇ ಹೇಳಿದ್ದು. ಆಗ ಅಕ್ಕ "ನೀನು ಹೋಗುವಾಗ ಕಾಲ ಕೆಳಗೆ ನೋಡುತ್ತ ಸಾವಧಾನವಾಗಿ ಹೋಗಬೇಕು" ಎಂದು ತಿಳಿ ಹೇಳಿದಳು.

ಅಷ್ಟು ದೊಡ್ಡ ಮನೆಯಲ್ಲಿ ರಾತ್ರಿಯಾಯಿತೆಂದರೆ ಯಶೋದಾಳಿಗೆ ಹೆದರಿಕೆ ಶುರುವಾಗುತ್ತಿತ್ತು. ರಾತ್ರಿಯಲ್ಲಿ ಯಾವ ಯಾವುದೋ ಹಕ್ಕಿಗಳು ಕೂಗುತ್ತಿದ್ದವು. ಸಾಕಿದ ನಾಯಿ ಚಿಕ್ಕ ಪುಟ್ಟ ಸಪ್ಪಳಕ್ಕೂ ಕೂಗುತ್ತಿತ್ತು. ಒಂದು ದಿನವಂತೂ ಯಾರೋ ಅಳುತ್ತಿರುವ ಧಾಟಿಯಲ್ಲಿ ಹಕ್ಕಿಯೊಂದು ಕೂಗುತ್ತಿತ್ತು. ಯಜಮಾನರ ಹತ್ತಿರ ಕೇಳೋಣವೆಂದರೆ ಅವರಾಗಲೇ ನಿದ್ದೆ ಮಾಡುತ್ತಿದ್ದರು. ಇವಳು ದೇವರ ಸ್ಮರಣೆ ಮಾಡುತ್ತ ನಿದ್ದೆ ಹೋದಳು. ಬೆಳಗಾದೊಡನೆಯೇ ಚಿಕ್ಕತ್ತೆಯ ಹತ್ತಿರ ಹೋಗಿ ರಾತ್ರಿ ಯಾರೋ ಅಳುತ್ತಿರುವಂತೆ ಕೂಗುತ್ತಿರುವ ಹಕ್ಕಿಯ ಬಗ್ಗೆ ತಿಳಿಸಿದಳು. ಅದಕ್ಕೆ ಚಿಕ್ಕತ್ತೆಯು "ಯಶೋದಾ ಅದು ಹಕ್ಕಿ ಕೂಗಿದ್ದಲ್ಲ. ಚೌಡಮ್ಮ ಅಳುವುದು. ಅದಕ್ಕೆ ಏನಾದರೂ ಅಶುಚಿ ಆಗಿರಬಹುದು. ಅದಕ್ಕೆ ಇಂದು ಪೂಜೆ ಕೊಡಬೇಕು" ಎಂದು ಸಹಜವಾಗಿ ಹೇಳಿದರು. ಅದನ್ನು ಕೇಳಿ ಯಶೋದಾ ಕಂಗಾಲಾಗಿ ಬಿಟ್ಟಳು. ಆಗ ಚಿಕ್ಕತ್ತೆ "ನಮ್ಮ ಚೌಡಮ್ಮ ನಮ್ಮನ್ನೆಲ್ಲಾ ಕಾಯುವ ದೇವರು. ಅವಳು ಯಾವಾಗಲೂ ನಮ್ಮನ್ನೆಲ್ಲಾ ಸುಸ್ಥಿತಿಯಲ್ಲಿ ಇಡುತ್ತಾಳೆ" ಎಂದು ಭಕ್ತಿ ಭಾವದಿಂದ ಕೈ ಮುಗಿದು ಹೇಳಿದರು. ಆಗ ಯಶೋದೆಗೆ ಸ್ವಲ್ಪ ಸಮಾಧಾನವಾಯಿತು.

ಯಶೋದೆಗೆ ಆದ ಇನ್ನೊಂದು ಅನುಭವವನ್ನು ಹಂಚಿಕೊಳ್ಳಲೇಬೇಕು. ಆ ದಿನ ಮಧ್ಯಾಹ್ನ 3 ಘಂಟೆಗೆ ದೊಡ್ಡದಾದ ಮಳೆ ಬಂತು. ಒಂದು ತಾಸಿನವರೆಗೆ ಮಳೆ ಸುರಿದಾದ ಮೇಲೆ ಏಕದಂ ದೊಡ್ಡ ಬಿಸಿಲು ಬಂತು. ಮಳೆ ಬಂದಿದ್ದೇ ಸುಳ್ಳು ಎಂಬಂತಹ ಬಿಸಿಲು. ಹೊರಗಿನ ವಾತಾವರಣ ತುಂಬಾ ಆಹ್ಲಾದಕರವಾಗಿತ್ತು. ಯಶೋದಾ ಯಥಾ ಪ್ರಕಾರ ಮಗುವನ್ನು ಅಕ್ಕನ ಹತ್ತಿರ ಬಿಟ್ಟು ಹಿಂದಿನ ಮಾರ್ಗದಿಂದ ತೋಟಕ್ಕೆ ಹೊರಟಳು. ತೋಟದಲ್ಲಿ ಸ್ವಲ್ಪ ದೂರ ಹೋದೊಡನೆಯೇ ಒಂದು ಹಳ್ಳ ಸಿಗುತ್ತದೆ. ಅದನ್ನು ದಾಟಲು ಸಿಮೆಂಟಿನ ಸೇತುವೆ ಇದೆ. ಇವಳು ಯಾವುದೋ ಹಾಡನ್ನು ಹಾಡುತ್ತ ಆ ಸೇತುವೆಯನ್ನು ದಾಟಿದ್ದಾಳೆ. ತಲೆಯೆತ್ತಿ ಎದುರಿಗೆ ನೋಡಿದವಳು ಗರಬಡಿದವಳಂತೆ ನಿಂತು ಬಿಟ್ಟಳು. ಎದುರಿಗೆ ತುಂಬಾ ಸುಂದರವಾದ ಮೋಹಕವಾದ ದೃಶ್ಯವನ್ನು ನೋಡಿ ಸ್ತಂಭೀಭೂತಳಾದಳು.

*PAGE DONATED BY : **HEGDE HOSPITAL, CHEMBUR**, COURTESY : **DR. DINESH HEGDE***

ಇಡೀ ತೋಟವೂ ಬಣ್ಣ ಬಣ್ಣದ ಕಿರಣಗಳಿಂದ ಕಂಗೊಳಿಸುತ್ತಿತ್ತು. ಎತ್ತ ತಿರುಗಿದರೂ ಅದೇ ದೃಶ್ಯ. ಕಾಮನಬಿಲ್ಲಿನ ಏಳು ಬಣ್ಣಗಳೂ ಅಲ್ಲಿ ಮಿನುಗುತ್ತಿದ್ದವು. ಇದೆಂಥಾ ಅದ್ಭುತ. ಇದು ಯಾವ ದೇವರ ಸೃಷ್ಟಿ. ಒಂದು ನಿಮಿಷ ಅವಳು ನಿಂತಲ್ಲಿಯೇ ನಿಂತು ಎಲ್ಲವನ್ನು ಅವಲೋಕಿಸಿದಳು. ಅವಳಿಗೆ ಮೈಯಲ್ಲಿ ಮಿಂಚು ಹರಿದಂತಾಯಿತು. ಆ ದೃಶ್ಯವನ್ನು ನೋಡುತ್ತ ಅವಳಿಗೆ ಕಣ್ಣು ತುಂಬಿ ಬಂತು. ಆದರೆ ಒಂದೇ ಒಂದು ಹೆಜ್ಜೆಯನ್ನು ಮುಂದಿಡಲು ಅವಳಿಂದ ಸಾಧ್ಯವಾಗಲಿಲ್ಲ. ಸಾವಾಕಾಶವಾಗಿ ಒಂದೊಂದೆ ಕಾಲನ್ನು ಹಿಂದಿಡುತ್ತಾ ಬಂದಳು ಮತ್ತು ಸೇತುವೆಯನ್ನು ದಾಟಿದೊಡನೇ ಮನೆಯ ಕಡೆ ಓಡೋಡುತ್ತ ಬಂದಳು. ಅವಳಿಗೆ ಮತ್ತೆ ತಿರುಗಿ ನೋಡುವ ಧೈರ್ಯ ಬರಲಿಲ್ಲ.

ಅವಳ ಎದೆಯ ಬಡಿತ ಹೆಚ್ಚಾಯಿತು. ಯಾರ ಹತ್ತಿರವೂ ಏನನ್ನೂ ಹೇಳದೇ ಅವಳು ದೇವರ ಮುಂದೆ ಕೈ ಮುಗಿದು ಕುಳಿತಳು. ಯಜಮಾನರು ಬಂದೊಡನೆಯೇ ಅವರ ಮುಂದೆ ಎಲ್ಲವನ್ನು ಸವಿಸ್ತಾರವಾಗಿ ಹೇಳಿದಳು. ಅದಕ್ಕೆ ಅವರು "ದೊಡ್ಡದಾಗಿ ಮಳೆ ಬಂದು ಎಲ್ಲ ಎಲೆಗಳ ಮೇಲೂ ನೀರ ಹನಿಗಳು ನಿಂತವು. ಕೂಡಲೇ ದೊಡ್ಡದಾದ ಬಿಸಿಲು ಬಂದಿದ್ದಕ್ಕೆ ಸೂರ್ಯನ ಕಿರಣಗಳು ನೀರಿನ ಹನಿಯ ಮೇಲೆ ಬಿದ್ದು ನೂರಾರು ಕಾಮನಬಿಲ್ಲಿನ ಬಣ್ಣಗಳು ಅಲ್ಲಿ ಉದ್ಭವವಾದವು. ಅದಕ್ಕಾಗಿ ಅಂತಹ ತೇಜೋಹಾರಿ ದೃಶ್ಯಗಳು ಅಲ್ಲಿ ಗೋಚರಿಸಿದವು. ನಾನೂ ನೋಡಬೇಕಿತ್ತು. ಅಂತಹ ಬೆಡಗಿನ ದೃಶ್ಯಗಳನ್ನು" ಎಂದು ಹೇಳಿದರು. ಆದರೂ ಯಶೋದಾಳ ಎದೆಯ ಬಡಿತ ತಹಬದಿಗೆ ಬರಲಿಲ್ಲ. ಅದು ಸರಿ ಹೋಗಲು ಎರಡು ದಿನಗಳೇ ಬೇಕಾದವು. ಅವಳು ಕಡತೋಕಾದಲ್ಲಿ ಸ್ವಲ್ಪ ದಿನ ಉಳಿದು ತಿರುಗಿ ಸಿರ್ಸಿಗೆ ಬರುವಾಗ ಯಾರಿಗೂ ಕಾಣದ ಹಾಗೇ ಅಳುತ್ತಿದ್ದಳು. ತವರು ಮನೆಯನ್ನು ಬಿಟ್ಟು ಗಂಡನ ಮನೆಗೆ ಹೋಗುವ ಮಗಳಂತೆ. ಎಲ್ಲರೂ ಹಾರ್ದಿಕವಾಗಿ ಅವಳನ್ನು ಬೀಳ್ಕೊಟ್ಟು ಕಾರು ಹತ್ತಿಸುವಾಗ ಗದ್ಗದಿತರಾಗಿ ಶುಭ ಹಾರೈಸುತ್ತಿದ್ದರು. ❍

## ಸಿಳ್ಳಿನಾ ಕರೆ

**– ಉಪಾಧ್ಯಾಯ, ಧಾರೇಶ್ವರ**

ಒಮ್ಮೆ ಸಿಳ್ಳೆ ಹೊಡೆದರೆ ಸಾಕು ಗುರ್ ಎಂಬರು
ಇನ್ನೊಮ್ಮೆ ಹೊಡೆದರೆ ಕೈಯನೆತ್ತುವರು
ನನ್ನ ಮಟ್ಟಿಗೆ ಅದೆಲ್ಲ ಸುಳ್ಳಿನ ಕಂತೆ
ನಾನೆಂದರೆ ಎಲ್ಲರಿಗೂ ಅಚ್ಚುಮೆಚ್ಚಂತೆ

ಕೊಳಲಿನಾ ದನಿ ಕೇಳ್ದ ಗೋಪಿಕಾ ಸ್ತ್ರೀಯಂತೆ
ನನ್ನ ಸಿಳ್ಳಿನಾ ಕರೆ ಕೇಳಿ ಓಡಿ ಬರುವುದು ಯಾಕಂತೆ ?
ಒಮ್ಮೆ ಸೀಟಿಯ ಹೊಡೆಯೆ ನಿಂತಲ್ಲೇ ಆಲಿಪರು
ಎರಡನೆ ಬಾರಿಗೆ ಮೈತಾಗುವಂತೆ ನಿಲುವರು

ಮೂರಕ್ಕೆ ತಲೆ ಮುಟ್ಟಿ ತಬ್ಬಿಕೊಂಬರು
ಕಲಿಯುಗದ ಕೃಷ್ಣ ನಾನಲ್ಲವೇನೇ
ಎಂದು ಉಲಿಯಿತು ಬಿಂಕದಲಿ ಕುಕ್ಕರು
ಹೌದೆಂದು ನಕ್ಕರು ಕವನ ಓದಿದವರು

★ ★ ★

## ಸನಾತನ

**– ಶಾರದಾ ಎ. ಅಂಚನ್, ಕೊಡವೂರು**

ಯಾವ ಜನ್ಮದ ಪುಣ್ಯವೋ
ಏನೀ ಸುಕೃತದ ಫಲವೋ
ಜನಿಸಿ ಬಂದೆನೋ ಧರೆಯಲಿ
ಸನಾತನದ ನೆರಳಲಿ
ಸನಾತನ ಓ ಸನಾತನ ॥

ಮನೆಯೊಂದು ಮಂದಿರವೋ
ಮಂದಿರದೊಳು ಕೋಟಿ ದೇವರುಗಳೋ
ಹೊಸ್ತಿಲಲಿ ರಂಗೋಲಿಯೋ
ಅಂಗಳದಲಿ ತುಳಸಿಯೋ
ಅರಿಯುತ್ತಾ ಹೋದೆ ಸನಾತನ ॥

ಕಂಡ ಕಂಡ ಕಲ್ಲಿನಲಿ
ಕೆತ್ತಿದ ಆ ಮೂರ್ತಿಯಲಿ
ಕಂಡೆನೋ ಪರಮಾತ್ಮನ
ಪಡೆದೆನೋ ತನ್ಮಯತೆಯ ದರ್ಶನ
ಸಂಭ್ರಮಿಸಿದೆ ನಾ ಸನಾತನ ॥

ಗಾಳಿ ನೀರು ಅಗ್ನಿ ಭೂಮಿ
ಆಕಾಶ ಪಂಚಭೂತದಲಿ
ಅಣುರೇಣು ತೃಣ ಕಾಷ್ಠ
ದೈವತ್ವವೆಂಬ ಶ್ರೇಷ್ಠ ಧರ್ಮದಲಿ
ಪಾವನವೀ ಸನಾತನ ॥

ಋಷಿ ಪರಂಪರೆಯ ಪಾಲನೆ
ಸಾಧು ಸಂತರ ಅರ್ಚನೆ
ಗುರು ಹಿರಿಯರ ಆಧಾರ
ದೀನ ದಲಿತರ ಪ್ರೀತ್ಯಾದರ
ಸರ್ವ ಪ್ರೇಮಮಯ ಸನಾತನ ॥

ಕಾಮಧೇನು ಕಲ್ಪವೃಕ್ಷ
ಫಲಪುಷ್ಪ ಪ್ರಕೃತಿಯಾರಾಧನೆ
ಮೃಗಪಕ್ಷಿ ಸರಿಸೃಪ
ನದಿ-ತೊರೆ ಸಾಗರಕೂ ಅರ್ಚನೆ
ಸರ್ವ ದೇವಮಯ ಈ ಸನಾತನ ॥

ಯುಗ ಯುಗಗಳು ಕಳೆದರೂ
ಅಳಿಯದ ಪುರಾತನ ಸಂಸ್ಕೃತಿ
ಕರುಣೆ ಶಾಂತಿ ಸಹನೆಗೆ ಒಲಿದ
ಸಕಲ ಪಂಥದ ಅಧಿಪತಿ
ವಿಶ್ವಗುರು ಈ ಸನಾತನ ॥

★ ★ ★

*PAGE DONATED BY : **SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR***

# ಮುಂಬೈ ಕನ್ನಡ ಕವಿಗಳು-ಅರವಿಂದ ನಾಡಕರ್ಣಿ

✍ ಡಾ. ಶೈಲಜಾ ಹೆಗಡೆ, ಮುಂಬಯಿ

*(ಕಳೆದ ಸಂಚಿಕೆಯಿಂದ)*

ಔದ್ಯೋಗೀಕರಣದ ಪ್ರಭಾವಕ್ಕೊಳಗಾದ ಮಾನವನ ಬದುಕು, ಮೌಲ್ಯಗಳನ್ನು ಕಳೆದುಕೊಂಡು ವಿನಾಶದ ಅಂಚಿಗೆ ಸಾಗುತ್ತಿರುವ ಬಗೆಯನ್ನು ನಾಡಕರ್ಣಿಯವರು ತಮ್ಮ ಕವಿತೆಯಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ. ಭಾರತೀಯ ಜೀವನಮೌಲ್ಯಗಳನ್ನು ಪ್ರತಿಬಿಂಬಿಸುವ ನಮ್ಮ ಗ್ರಾಮೀಣ ಸಂಸ್ಕೃತಿ, ನಾಗರಿಕ ಬೆಳವಣಿಗೆಯ ಹೆಸರಿನಲ್ಲಿ ಸತ್ವಹೀನವಾಗುತ್ತಿರುವುದನ್ನು ಅವರು ವಿವಿಧ ಪ್ರತಿಮೆಗಳ ಮೂಲಕ ಪುಷ್ಟೀಕರಿಸಿದ್ದಾರೆ. ಅನಿವಾರ್ಯವಾಗಿ ನಾಗರಿಕ ಜೀವನಕ್ಕೆ ಕಟ್ಟುಬಿದ್ದ ಕವಿ ಮನಸ್ಸು ತನ್ನ ಬಾಲ್ಯದ ಗ್ರಾಮೀಣ ಬದುಕನ್ನು ಪುನಃ ಪುನಃ ನೆನೆದು ಖೇದಗೊಳ್ಳುತ್ತದೆ. ಕವಿ ತನ್ನನ್ನು ಗ್ರಾಮೀಣ ಬದುಕಿನೊಂದಿಗೆ ಗುರುತಿಸಿಕೊಳ್ಳಲು ಯತ್ನಿಸುತ್ತಾನೆ. 'ಜರಾಸಂಧ-1' ಕವಿತೆಯ ಸಾಲುಗಳು ಇದಕ್ಕೆ ಉತ್ತಮ ಉದಾಹರಣೆಯಾಗಿವೆ.

ಪುರಾವಾಸದ ನೆನಪಿನಾಲದ ತೋಟ ಬಯಲು  
ತಣ್ಣಗೆ ಹರಿವ ಹೊನಲ ತಡಿ ನುಣ್ಣನಂಬೆಗಾಲು  
ತೇರ ಜಾತ್ರೆಯ ಹೆದ್ದಾರಿಯಲ್ಲಿ ಜುಟ್ಟು ಮಾಣಿ ನುಗ್ಗಾಟ  
ತುಳಸಿವನದಂಗಳದಲ್ಲಿ ಚಡ್ಡಿ ಕಿಲ ಕಿಲಾಟ  
ಜಾಜಿ ಸಂಪಿಗೆ ಗುಲಾಬಿ ಜೊಂಪದಲಿ ಕುಡಿಮೀಸೆ ವಿಹಾರ  
ಅಪ್ಪನ ಭದ್ರ ಮಾಡಿನಡಿ ಕುಡಿಯಾಗಿ  
ಇಡಿಯಾಗಿ ಬೆಳೆದ ಬದುಕಿನ ನೆನಪು  
ಬೆಳಗು ಬೈಗಿನ ಶೀತಲ ಸೊಂಪು.

ಪ್ರಕೃತಿಯ ಜೊತೆ ಜೊತೆಯಲ್ಲಿಯೇ ನಡೆಯುವುದು ಮಾನವನ ಸಹಜ ಬೆಳವಣಿಗೆ. ಇದನ್ನೇ ಕವಿ 'ಇಡಿಯಾಗಿ ಬೆಳೆದ ಬದುಕಿನ ನೆನಪು' ಎಂಬ ಸಾಲಿನ ಮೂಲಕ ಮಾನವನ ಸಮಗ್ರ ಬೆಳವಣಿಗೆ ಗ್ರಾಮೀಣ ಬದುಕಿನಲ್ಲಿ ಮಾತ್ರ ಸಾಧ್ಯ ಎಂಬುದನ್ನು ಸೂಚಿಸಿದ್ದಾರೆ. ಪ್ರಸ್ತುತ 'ಜರಾಸಂಧ' ಕವಿತೆಯ ಮುಂದಿನ ಭಾಗದಲ್ಲಿ ಆಧುನಿಕ ಭಾರತೀಯನ ಮನಸ್ಸು ಯಾಂತ್ರಿಕತೆಯ ಪರಿಣಾಮವಾಗಿ ಇಬ್ಭಾಗವಾಗಿ ಒಡೆದಿರುವುದನ್ನು ಚಿತ್ರಿಸಲಾಗಿದೆ. ಇಬ್ಭಾಗವಾಗಿ ಬೆಳೆದ ಪುರಾಣ ಪುರುಷ ಜರಾಸಂಧನನ್ನು ಆಧುನಿಕ ಮಾನವನ ಮನಸ್ಸಿನೊಡನೆ ಹೋಲಿಸಲಾಗಿದೆ. ಒಮ್ಮೆ ಯಾಂತ್ರಿಕತೆಯ ಸುಳಿಯಲ್ಲಿ ಸಿಕ್ಕ ಮಾನವ ಮರಳಿ ಗ್ರಾಮೀಣ ಬದುಕಿಗೆ ಬರುವುದು ಕಷ್ಟ ಎಂಬ ತಥ್ಯವನ್ನೂ ಈ ಕವಿತೆ ಸ್ಪಷ್ಟಪಡಿಸುತ್ತದೆ. ಅಂತೆಯೇ 'ಮಾಯಾವಿ' ಕವನ ಸಂಕಲನದ 'ಬೆಳಗಾಯಿತು ಪಟ್ಟಣದಲ್ಲಿ' ಕವಿತೆ ಶಹರದ ಬೆಳಗನ್ನು ಈ ರೀತಿ ವರ್ಣಿಸಿದೆ.

ಬೆಳಗಾಯಿತೇ? ಆಹಾ ಬಂತೋ ಬಂತು ಬೆಳಕು  
ಫುಟಪಾತಿನಲಿ ಮಲಗಿದವರ ಬಡಿದೆಬ್ಬಿಸಿ  
ಬೆಡಗು ಬಂಗಲೆಯ ಸುಖಶಯ್ಯೆ ಸಾಲು ಸತರಂಜಿಗಳ  
ಸುರುಳಿಯಲ್ಲುರುಳಾಡಿ  
ಕಿಕ್ಕಿರಿದ ಕಟ್ಟಡ ಮಜಲು ಮಜಲುಗಳಿಂದ ಮೇಲೇರಿ  
ಹೋಯಿತು ನೇರ ಸತ್ಯಲೋಕಕ್ಕೆ! ಏಕೆ?  
ಅದಕಿಲ್ಲವೇ ಜನಜೋಪಡಿ ಸಾಲು ಸಾಲುಗಳಲ್ಲಿ  
ದೂರ ಗಿರಣಿಯ ಸಿಳ್ಳು, ಬೀದಿ ಬಣಜಿಗರೊರಲು  
ಗವಳಿಗನ ಗಂಟೆ, ಕ್ಯೂಗಳ ತಂಟೆ,  
ಹೋಟೇಲು ರೇಡಿಯೋ ಗಲಾಟೆ  
ನಡುರಸ್ತೆಯ ಮಾರಾಮಾರಿ ಸದ್ದು,  
ಪೋಲೀಸು ಗುದ್ದು  
ಹಾರ್ನು ಗರ್ಜನೆ, ಅಪಘಾತ  
ಕೋಲಾಹಲ  
ನಿಲ್ದಾಣ ಗೊಂದಲ ಟಿಫೀನು ಹೊತ್ತೋಡುವವರ ಗದ್ದಲ  
ದಲಾಲಿ ಬೊಬ್ಬೆ...  
"ಇದು ಬರಿ ಬೆಳಗಲ್ಲೋ ಅಣ್ಣಾ"



ವರಕವಿ ದ. ರಾ. ಬೇಂದ್ರೆಯವರ 'ಬೆಳಗು' ಕವಿತೆಯನ್ನು ನೆನಪಿಸುವ ಕೊನೆಯ ಸಾಲು, ಪ್ರಕೃತಿಗೆ ವೈರುಧ್ಯವಾದ ಶಹರದ ಬೆಳಗನ್ನು ವಿಡಂಬನಾತ್ಮಕವಾಗಿ ಪ್ರತಿಪಾದಿಸಿದೆ. ಮೂಡಲವನ್ನೇ ಮನೆಯಾಗಿಸಿ, ಮುತ್ತಿನ ನೀರಿನಿಂದ ಎರಕ ಹೊಯ್ದು, ಎಲೆಗಳ ಮೇಲೆ, ಹೂಗಳ ಒಳಗೆ ಅಮೃತದಾ ಬಿಂದು, ಗಿಡಗಂಟೆಗಳ ಕೊರಳೊಳಗಿಂದ ಹಕ್ಕಿಗಳಾ ಹಾಡು, ಕಾಡಿನ ನಾಡು ಗಂಧರ್ವ ಸೀಮೆಯೇ ಆಯಿತು ಎಂದು ಮುಂತಾಗಿ ಬೇಂದ್ರೆಯವರ 'ಬೆಳಗು' ಕವಿತೆ, ಪ್ರಶಾಂತವಾದ ನವ ಉದಯವನ್ನು ಬಣ್ಣಿಸಿದರೆ, ಕಿಕ್ಕಿರಿದ ಕಟ್ಟಡದ ಮಜಲುಗಳು, ಫುಟಪಾತಿನಲ್ಲಿ ಮಲಗಿದವರ ಬಡಿದೆಬ್ಬಿಸುವದು, ದೂರ ಗಿರಣಿಯ ಸಿಳ್ಳು, ಬೀದಿ ಬಣಜಿಗರ ಒರಲು, ಗವಳಿಗನ ಗಂಟೆ, ಕ್ಯೂಗಳ ತಂಟೆ, ಹೋಟೇಲು ರೇಡಿಯೋ ಗಲಾಟೆ ಇತ್ಯಾದಿ ಶಹರದ ಗೊಂದಲಮಯ ಬೆಳಗನ್ನು ಅರವಿಂದ ನಾಡಕರ್ಣಿಯವರ 'ಬೆಳಗಾಯಿತು ಪಟ್ಟಣದಲ್ಲಿ' ಕವಿತೆ ಅನಾವರಣಗೊಳಿಸುತ್ತದೆ. ಕೃಷಿಪ್ರಧಾನ ಸಂಸ್ಕೃತಿಯಿಂದ ವಾಣಿಜ್ಯಪ್ರಧಾನ ಸಂಸ್ಕೃತಿಗೆ ಮುಖ ಮಾಡಿದ ಮಾನವ ಬದುಕಿನ ಹೋರಾಟ, ಬದಲಾಗುತ್ತಿರುವ ಕಾಲದೆದುರು ಆತ ವಿಫಲನಾಗುತ್ತಿರುವುದನ್ನು ಪ್ರಸ್ತುತ ಕವಿತೆ ಸೂಚಿಸುತ್ತದೆ. ಮುಂಬೈ ಪಟ್ಟಣದ ಬೆಳಗು ಕೂಡ ಬರಿ ಬೆಳಗಲ್ಲ. ಇಲ್ಲಿಯೂ ಯಾವಾಗಿನಂತೆ ಬೆಳಗಿನ ಸೂರ್ಯೋದಯವಾಗುತ್ತದೆ. ಆದರೆ, ಬಡವರು, ನಿರ್ಗತಿಕರು ದಿನನಿತ್ಯ ಬಡತನದ ಬೇಗೆಯಲ್ಲಿ ಬೇಯುತ್ತಿದ್ದಾರೆ. ಬದುಕಿನ ಕತ್ತಲೆಯಲ್ಲಿ ತೊಳಲುತ್ತಿದ್ದಾರೆ. ಶ್ರೀಮಂತ ಮತ್ತು ಬಡವರ ನಡುವಿನ ಅಂತರ ಕಡಿಮೆಯಾಗಲೇ ಇಲ್ಲ. ಬೆಳಗಿನಲ್ಲಿ ಫುಟ್‌ಪಾತಿನಲ್ಲಿ ಮಲಗಿದವರನ್ನು ಬಡಿದೆಬ್ಬಿಸುವ ಕ್ರಿಯೆ ಸ್ವಾತಂತ್ರ್ಯಾನಂತರವೂ ಇಂದಿಗೂ ನಡೆಯುತ್ತಲೇ ಇದೆ ಎಂದು ಕವಿ ನುಡಿಯುತ್ತಾರೆ. ಇದೇ ರೀತಿ, 'ಹಿಂಡು' ಎಂಬ ಕವಿತೆ, ನಗರಜೀವನ ಹಿಂಡು ಹಿಂಡಾಗಿ ಬರುವ ಮಾನವನನ್ನು ಹೇಗೆ ಹಿಂಡಿ ಹಿಪ್ಪೆ ಮಾಡುತ್ತದೆ ಎಂಬುದನ್ನು ಸೊಗಸಾಗಿ ವರ್ಣಿಸಿದೆ. ಶ್ಲೇಷಾರ್ಥಕ್ಕೆ ಇದೊಂದು ಉತ್ತಮ ದೃಷ್ಟಾಂತವಾಗಿದೆ.

ಕಣ್ತೆರೆದರೆ ಕುಕ್ಕುವ ಹಿಂಡು  
ಮುಚ್ಚಿದರೆ ಕಿವಿ ಕೊರೆವ ಹಿಂಡು  
ಮನದ ಗುಮ್ಮಟದಲ್ಲಿ ಸದಾ ಮೊರೆವ ಹಿಂಡು  
ಎದೆಗೂಡಿನಲ್ಲೂ ಸಿಳ್ಳು ಹೊಡೆವ ಹಿಂಡು  
ಹಿಂಡೋ ಹಿಂಡು ಮಾರಾಯಾ...

*PAGE DONATED BY :* ***AKADAS & FAMILY***

"ಔದ್ಯೋಗೀಕರಣದಿಂದ ನಗರ ಜೀವನದಲ್ಲಿ ಆದ ಬಹುದೊಡ್ಡ ಪರಿಣಾಮವೆಂದರೆ ಮನುಷ್ಯ ಗುಂಪಿನಲ್ಲಿ ಗೋವಿಂದ ಆದದ್ದು. ಹತ್ತು ಜನರಂತೆ ನಡೆ, ನುಡಿ, ವಿಚಾರ. ಇಂಥ 'ಹಿಂಡುಮನ'ದ ಬಗ್ಗೆ ಈ ಕವಿತೆ ವಿಡಂಬಿಸುತ್ತದೆ. ಸ್ವಂತವಾದ, ವ್ಯಕ್ತಿ ವಿಶಿಷ್ಟವಾದ ಭಾವ, ಕನಸು, ಸಂಕಲ್ಪ ಬಿಂದು ಬಿಂದುವಾಗಿ ಬಿದ್ದು ಹೋಗುವಂತೆ ಹಿಂಡೋ ಹಿಂಡು ಎಂಬಲ್ಲಿ ಹಿಂಡನ್ನು ನಾಮಪದ ಮತ್ತು ಕ್ರಿಯಾಪದವಾಗಿ ಬಳಸಿರುವುದು ಗಮನೀಯ. ಆ ಸಾಲುಗಳಲ್ಲಿ 'ಹಿಂಡುಮನ'ದಿಂದ ಆತ್ಮಘಾತವಾಗುವ ಬಗೆಯನ್ನು ವರ್ಣಿಸಲಾಗಿದೆ" ಎಂದು ಎಚ್.ಎಸ್.ವೆಂಕಟೇಶಮೂರ್ತಿ ಅವರು ಅರವಿಂದ ನಾಡಕರ್ಣಿಯವರ ಕವಿತೆಯ ಕುರಿತು ತಮ್ಮ ಲೇಖನದಲ್ಲಿ ಉಲ್ಲೇಖಿಸಿದ್ದಾರೆ. "ಯಾರು ನೋಡುವರು ನಮ್ಮನ್ನು, ಫುಟ್‌ಪಾತಿನಲಿ ಮನೆಮಾಡಿ, ಫುಟ್‌ಪಾತಿನಲ್ಲಿ ಸಾಯುವವರನ್ನು" ಎಂಬ 'ಬೀದಿ ಸಂಸಾರಿಗಳು' ಕವಿತೆಯ ಸಾಲುಗಳು ಶಹರದ ಫುಟ್‌ಪಾತಿನಲ್ಲಿ ಜೀವಿಸುವವರ ಚಿಂತಾಜನಕ ಸ್ಥಿತಿಯನ್ನು ದರ್ಶಿಸುತ್ತವೆ. ಅವರು ಅಲ್ಲಿಯೇ ಹುಟ್ಟಿ, ಅಲ್ಲಿಯೇ ಬೆಳೆದು ಅಲ್ಲಿಯೇ ಮರಣ ಹೊಂದುವವರು. ಕವಿಗೆ ಅವರ ಕುರಿತಾದ ಅನುಕಂಪವಿದೆ. ದೀನ ದಲಿತೋದ್ಧಾರದ ವ್ಯರ್ಥ ಘೋಷಣೆ ಕವಿ ಮನಸ್ಸನ್ನು ಕಲಕಿದೆ. ಫುಟ್‌ಪಾತಿನಲ್ಲೇ ಹುಟ್ಟಿ ಫುಟ್‌ಪಾತಿನಲ್ಲೇ ಸಾಯುವ ಈ ಮಂದಿ, ಸತ್ತ ಮೇಲೂ ಸ್ವರ್ಗ ಅಥವಾ ನರಕದ ಫುಟ್‌ಪಾತನ್ನೇ ಸೇರುತ್ತಾರಂತೆ! ಎಂದು ಕವಿ ವಿಷಾದ ವ್ಯಕ್ತಪಡಿಸಿದ್ದಾರೆ.

ಕೇವಲ ನಗರಕ್ಕೆ ಸಂಬಂಧಿಸಿದ ಕವಿತೆಗಳಲ್ಲದೆ, ರಾಜಕೀಯ ಅಧಃಪತನದ ಸಂಕೇತವಾಗಿ ಮೂಡಿಬಂದ ರಾಜಕೀಯ ವಿಡಂಬನೆಯ 'ಗಸರಗುಂಡಿ', ಕಾಲಮಾನಕ್ಕೆ ತಕ್ಕಂತೆ ಬದಲಾದ ಹಳ್ಳಿಯ ಜೀವನವನ್ನು ಚಿತ್ರಿಸುವ 'ಹಂಚಿನಮನೆ', ಗಂಡುಮಗುವನ್ನೇ ಪಡೆಯಬೇಕೆಂಬ ಹಂಬಲದಿಂದ ಮಾಡುವ ಸಂಸ್ಕಾರಕ್ಕೆ ಸಂಬಂಧಿಸಿದ 'ಪುಂಸವನ', ಮನುಷ್ಯ ಮನುಷ್ಯರ ನಡುವಿನ ಸಂಬಂಧವನ್ನು ಮರೆಮಾಚುವ 'ಶೂನ್ಯಪುರ', ವ್ಯಕ್ತಿಯ ಬದುಕಿನಲ್ಲಿ ಹಾಗೂ ಸಮಾಜದಲ್ಲಿ ಆಗುವ ಬದಲಾವಣೆಯನ್ನು ತ್ವರಿತಗತಿಯಲ್ಲಿ ವಿವರಿಸುವ 'ಕಾಲಗತಿ', ದ್ವೀಪವೊಂದರ ಕಥನವನ್ನು ನಿರೂಪಿಸುವ 'ದ್ವೈಪಾಯನ', ಮನುಷ್ಯನ ಆಕ್ರಮಣಶೀಲತೆಯನ್ನು ಸೂಚಿಸುವ 'ಬಾಲಕ-ನಾಯಕ' ಮೊದಲಾದ ವೈವಿಧ್ಯಮಯವಾದ ಅನೇಕ ಕವಿತೆಗಳನ್ನು ಕನ್ನಡ ಕಾವ್ಯ ಪ್ರಪಂಚಕ್ಕೆ ಅರವಿಂದ ನಾಡಕರ್ಣಿಯವರು ನೀಡಿದ್ದಾರೆ. ಅನುವಾದ ಸಾಹಿತ್ಯದಲ್ಲೂ ಇವರು ಸಾಕಷ್ಟು ಕೃಷಿಗೈದಿದ್ದಾರೆ. ಎಂಬತ್ತರ ದಶಕದಲ್ಲಿಯೇ 'ಸೃಜನವೇಧಿ' ಮಾಸಿಕ ಪತ್ರಿಕೆಯನ್ನು ಸ್ಥಾಪಿಸಿ, ಪತ್ರಿಕೆಯ ಸಹಸಂಪಾದಕರಾಗಿ ಕಾರ್ಯ ನಿರ್ವಹಿಸಿದ್ದಾರೆ. ಯುವಬರಹಗಾರರಿಗೆ ವಿಶೇಷ ಪ್ರೋತ್ಸಾಹ ನೀಡಿದ ಈ ಪತ್ರಿಕೆಯನ್ನು 'ಸೃಜನವೇಧಿ ಪ್ರಕಾಶನ ಜುಹು ಮುಂಬಯಿ' ಇದು ಪ್ರಕಟಗೊಳಿಸಿತು. ಈ ಪತ್ರಿಕೆಯಲ್ಲಿ ಪಾಶ್ಚಾತ್ಯ ಹಾಗೂ ಭಾರತೀಯ ಕಾವ್ಯಗಳ ಕುರಿತ ಸಾಹಿತ್ಯಕ, ವೈಚಾರಿಕ, ವಿಮರ್ಶಾ ಲೇಖನಗಳು ಪ್ರಕಟಗೊಂಡವು. ಹಲವಾರು ಅನುವಾದ ಸಾಹಿತ್ಯಗಳೂ ಮೂಡಿಬಂದವು. ರವೀಂದ್ರರ 'ಗೋಲ್ಡನ್ ಬೋಟ್' (ಚಿನ್ನದ ದೋಣಿ), 'ಗ್ರೆಂಡ್ ಫಾದರ್ಸ್ ಹೊಲಿಡೇ' (ಅಜ್ಜನ ಬಿಡುವು), 'ನ್ಯೂ ಬರ್ತ್' (ಹೊಸ ಜನ್ಮ), 'ಲೀವಿಂಗ್ ಹೋಮ್' (ಮನೆ ಬಿಡುವಾಗ) ಮೊದಲಾದವುಗಳನ್ನು ಅರವಿಂದ ನಾಡಕರ್ಣಿಯವರು ಕನ್ನಡಕ್ಕೆ ತಂದಿದ್ದಾರೆ.

ಮುಂಬಯಿ ಎಂ. ಡಿ. ಕಾಲೇಜಿನ ಮರಾಠಿ ವಿಭಾಗದ ಮುಖ್ಯಸ್ಥರಾಗಿ ಸೇವೆಗೈದ ಮರಾಠಿ ಕವಿ ಮೇಶರಾಮ ಅವರ ಕವಿತೆಯನ್ನು ನಾಡಕರ್ಣಿಯವರು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಆಕಾಶದ ಮುಕ್ತ ಮಾರ್ಗದಲ್ಲಿ ಸಂಚರಿಸುವ ಪಕ್ಷಿಯೊಡನೆ ನಡೆಸಿದ ಸಂಭಾಷಣೆಯುಳ್ಳ 'ಹಕ್ಕಿಗಳೇ' ಕವಿತೆಯ ಸಾಲುಗಳು-

> ಹಕ್ಕಿಗಳೇ ನೀವು ಹಾರುವಿರಿ ಆಕಾಶದ ಮುಕ್ತ ತುಂಡು ಅರಸುತ್ತ
> ನಿಮ್ಮ ತಾಕತ್ತರಿತು ಬದುಕಿರಿ, ನನ್ನಿಂದ ಬೇರೆ ಕೇಳಿ.
> ಹಕ್ಕಿಗಳೇ ಇವರ ಬಲೆ ರಂಗು ರಂಗಿನದು ಚಾತುರ್ಯಜಾಲ,
> ಒಮ್ಮೆ ಹಚ್ಚುವರು ಕೊರಳಿಗೆ ಪ್ರಸಿದ್ಧಿ ರೊಟ್ಟಿ ತುಣುಕು

ಸ್ವತಂತ್ರವಾಗಿ ಸಂಚರಿಸುವ ಹಕ್ಕಿಗೆ ಅದಕ್ಕಿಂತ ಬೇರೆ ಆನಂದವಿಲ್ಲ. ಜಾಲ ರಂಗು ರಂಗಿನದಾದರೂ ಹಕ್ಕಿಗದು ಬಂಧನವೆ. ಇದೇ ಕವಿತೆಯಲ್ಲಿ ಕವಿ ಒಂದೆಡೆ 'ಚಾಣಾಕ್ಷರು ಕೊಯ್ದಿದ್ದಾರೆ ನನ್ನ ಉಗುರು, ಕಣ್ಣಿಗೆ ಹಚ್ಚಿದ್ದಾರೆ ಪರಂಪರೆಯ ಪೊಳ್ಳು ಕಾಡಿಗೆ', ಗಿರಣಿ ಕೊಳವೆಯ ನಡುವೆ ಹೊಗೆಗೆ ಸಿಲುಕಿದ್ದು, ಹಳೇ ಹಿತ್ತಿಲಲಿ ತೂಗುತಿವೆ ನಮ್ಮ ಗೂಡುಗಳು' ಎಂದು ನುಡಿಯುತ್ತಾರೆ. ಪರಂಪರೆ ಹಾಗೂ ಯಂತ್ರೀಕರಣದ ಪ್ರಭಾವದಿಂದ ಮುಕ್ತ ಬದುಕಿನ ಕಲ್ಪನೆ ದೂರವಾಗುತ್ತಿದೆ. ಎಲ್ಲೆಲ್ಲೂ ಆಡಂಬರವೇ ತುಂಬಿದೆ ಎಂಬುದನ್ನು ಈ ಸಾಲುಗಳು ಸೂಚಿಸುತ್ತವೆ. ಕವಿತೆ ಸ್ವಚ್ಛಂದವಿರ ಬೇಕೆಂಬುದನ್ನೂ ಇದು ಧ್ವನಿಸುತ್ತದೆ. ಹೀಗೆ ಕವಿ ಅರವಿಂದ ನಾಡಕರ್ಣಿಯವರು ಕನ್ನಡ ಸಾಹಿತ್ಯಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ.

*(ಮುಂದುವರಿಯುವುದು)*

## UPCOMING EVENTS - PART OF DIAMOND JUBILEE CELEBRATION

As a part of **Diamond Jubilee Year Celebration** following events are organized -

**Fund Raising Event - Yakshagana on Sunday, 28th July, 2024 at Mehta Auditorium, Airoli**

**DAKSHA YAJNA AND SHRI RAMA DARSHANA**

❖❖❖ ❖❖❖ ❖❖❖

**SPORTS DAY**

**22nd September, 2024**

Details will be shared in the coming month

*PAGE DONATED BY : **SHRI N. R. HEGDE, DOMBIVLI***

# ಗ್ರಹಣಮುಕ್ತ ಚಂದ್ರ

✍ ಕರ್ಕಿ ಸುರೇಶ್ ಹೆಗಡೆ

*(ಕಳೆದ ಸಂಚಿಕೆಯಿಂದ)*

'ಸಂಧ್ಯಾ.. ಕೇಳಿಲ್ಲಿ' ಅಂತ ಕರೆದ. ಹಣ ತೆಗೆದು ಪತ್ನಿಯ ಕೈಲಿಟ್ಟು ಆದಿತ್ಯನಿಗೆ ಹಣ ಜೋಪಾನ ಅಂತ ಹೇಳು ಆಯ್ತಾ? ಸಂಧ್ಯಕ್ಕಾ.. ಅಂತ ನಾಗಜ್ಜಿಯ ಮಗ ಶೇಖರ ಎಂಬತ್ತು ರೂಪಾಯಿ ಕೊಟ್ಟು ಹೋದ. ಪತ್ನಿಯ ಹಣವನ್ನು ನಿತ್ಯದಂತೆ ಅವಳ ನಿಗದಿತ ಜಾಗದಲ್ಲಿಟ್ಟು ಆಟೋ ಕೀ ಕಿಸೆಯಲ್ಲಿ ಹಾಕಿ ಬರ್ತಿನೀ ಸಂಧ್ಯಾ. ಅಂತ ಹೊರಟ. ಸಂಧ್ಯಾ ಹೊರಬಂದು ದಿನನಿತ್ಯದಂತೆ 'ರೀ.. ಜೋಪಾನ... ಮಧ್ಯಾಹ್ನದ ಊಟ ಇಟ್ಟಿದ್ದೀನಿ. ಬಿಸಿಲು ಬಹಳ... ಸಾರು, ಪಲ್ಲೆ ಹಾಳಾದೀತು. ಬೇಗ ಊಟ ಮಾಡಿ' ಅಂತ ಹೇಳುತ್ತ.. ಟಾಟಾ ಅಂದಳು. ಕಿರಣ ಇಷ್ಟದ ಹಾಡನ್ನು ಗುನುಗುನಿಸುತ್ತಾ ಆಟೋ ಶುರು ಮಾಡಿ ಜೈ ಗಣೇಶ ಅಂದ.

ದಿನಗಳು ಕಳೆದು ತಿಂಗಳಾದುವು. ಮಗ ಆದಿತ್ಯನ ಪರೀಕ್ಷೆ ನಡೆಯುತ್ತಿತ್ತು. ಮಗನನ್ನು ಪರೀಕ್ಷೆಯ ದಿನ ತಾನೇ ಸೆಂಟರ್‌ವರೆಗೂ ಬಿಟ್ಟು ಪರೀಕ್ಷೆ ಮುಗಿದ ಮೇಲೆ ಕರೆದು ತರುತ್ತಿದ್ದ. ಮಗನ ಮುಖ ಮತ್ತು ನಡೆ ನೋಡಿ, ಪರೀಕ್ಷೆಯ ಪರಿಣಾಮ ಅರ್ಥೈಸಿಕೊಳ್ಳುತ್ತಿದ್ದ. ಎಂಬತ್ತೈದರಿಂದ.. ತೊಂಬತ್ತು ಬರಬೇಕು ಅಂತ ಮಗ ಹೇಳಿದ್ರಲ್ಲಿ ತಪ್ಪಿಲ್ಲ ಅನ್ನಿಸಿತು.

ಆದಿತ್ಯನಿಗೆ ಸರಾಸರಿ ಎಂಬತ್ತೆಂಟು ಅಂತ ಎಪ್ರಿಲ್ ತಿಂಗಳಲ್ಲಿ ರಿಸಲ್ಟ್ ಬಂದಾಗ ವಠಾರದ ಜನರೆಲ್ಲ ಆನಂದಿಸಿ ಆದಿತ್ಯನನ್ನು ಹೊಗಳಿ ಹಾರೈಸಿದರು. ವಠಾರದ ಸೂಪರ್ ಹುಡುಗಿ ಸುವರ್ಣನ ಸರಾಸರಿ ಎಂಬತ್ತೇಳರ ಅಂಕದ ದಾಖಲೆ ಮುರಿದಿತ್ತು. ಸ್ವತಃ ಸುವರ್ಣ ಇನ್ಫೋಸಿಸ್‌ನಿಂದ ಅರ್ಧ ದಿನ ರಜೆ ಹಾಕಿ ಖುಷಿಯಿಂದ ಎಲ್ಲರಿಗೂ ಮಿಠಾಯಿ, ಐಸ್‌ಕ್ರೀಮ್ ಹಂಚಿ ಸಂತೋಷಪಟ್ಟಳು. ಆದಿತ್ಯ ಅವಳ ರಕ್ಷಾ ಬಂಧನಕ್ಕೆ ರಾಖಿ ಕಟ್ಟುವ ತಮ್ಮ. ಅವಳು ವಠಾರದಲ್ಲಿ ಮೊದಲು ಹುಟ್ಟಿದ ಹುಡುಗಿ. ಎಲ್ಲಾ ಮಕ್ಕಳ ಲೀಡರ್. ತಂದೆ.. ತಾಯಿಗೆ ಅಂಜದ ಮಕ್ಕಳು, ಸುವರ್ಣಕ್ಕನ ಮಾತು ಕೇಳುತ್ತಿದ್ದರು. ಹತ್ತಿರದ ಒಂದೇ ಸರಕಾರಿ ಶಾಲೆಗೆ ಹೋಗುತ್ತಿದ್ದರಿಂದ ಬೇರೆ ಬೇರೆ ವರ್ಗದ ಎಲ್ಲರ ಅಭ್ಯಾಸದ ಜಾತಕ, ಶಿಕ್ಷಕರು ಕೊಟ್ಟ ಶಿಕ್ಷೆ, ಅವಳಿಂದ ಮನೆಯವರಿಗೆ ಅರ್ಥವಾಗುತ್ತಿತ್ತು. ಆದಾಗೆಲ್ಲ ಪುಗಸಟ್ಟೆ ಟ್ಯೂಶನ್ ಕೊಡುತ್ತಿದ್ದಳು. ವಠಾರದ ಎಲ್ಲರ ಮನೆಗೆ ಫ್ರೀ ಎಂಟ್ರಿ ಚಿಕ್ಕಂದಿನಿಂದ. ಏನೇ ಸ್ಪೆಷಲ್ ಯಾರದೇ ಮನೆಯಲ್ಲಿ ಆದರೂ ಸುವರ್ಣನಿಗೆ ಕರೆಯೋದು ಕಂಡ, ಉಳಿದ ಮಕ್ಕಳು ಆಗಾಗ... ತುಂಬಾ ಅಸೂಯೆ ಪಡುತ್ತಿದ್ದರು. ನಾಯಕ ನಟಿ ಅಂತ ಬಿರುದು ಬೇರೆ ಇಟ್ಟಿದ್ದರು.

ವಠಾರದಲ್ಲಿ ಸಂಭ್ರಮದ ದಿನವಾದ್ದರಿಂದ ದೀಪಾವಳಿಯಂತೆ ಆಚರಿಸಿದರು. ನಾಗಜ್ಜಿಯ ಮಗ ಶೇಖರ ಬಿರಿಯಾನಿ ಊಟ ಮಾಡಿಸಿದ್ದ. ಹಿರಿಯರೆಲ್ಲ ಆದಿತ್ಯ ಮುಂದೆ ಏನು ಕಲಿತಿಯಾ? ಅಂದರೆ ಆದಿತ್ಯ ಹುಮ್ಮಸ್ಸಿನಿಂದ 'ಡಾಕ್ಟರ್ ಆಗ್‌ತೀನಿ' ಅಂದ. ಕೇಳಿದ ಸುವರ್ಣ ದಂಗಾದಳು. ಮನಸ್ಸಿನಲ್ಲಿ ವಿಚಾರದ ಚಿಕ್ಕ ಸಸಿಯನ್ನು ನೆಟ್ಟಳು. ರಾತ್ರಿ ಹತ್ತುವರೆಗೆ ಸಹ ಭೋಜನ ಮಾಡಿ, ಎಲ್ಲರೂ ಮಲಗಲು ಹೊರಟರು.

ಮೇ ತಿಂಗಳ ಕೊನೆಯಲ್ಲಿ ಉಳಿದ ಎಲ್ಲಾ ಎಂಟ್ರೆನ್ಸ್ ಪರೀಕ್ಷೆಯ ಫಲಿತಾಂಶ ಬಂದು ಕರ್ನಾಟಕದ ಮೆಡಿಕಲ್ ಕಾಲೇಜ್ ಸೀಟುಗಳ ಹಂಚಿಕೆ ಆಗಿತ್ತು. ಆದಿತ್ಯನಿಗೆ ಹುಬ್ಬಳ್ಳಿಯ ಪ್ರತಿಷ್ಠಿತ ಕೀಮ್ಸ್ ಕಾಲೇಜು ಸಿಕ್ಕಿತ್ತು. ಅಪ್ಪ ಕಿರಣನಿಗೆ ಒಂದು ಕಡೆ ಖುಷಿ, ಹೆಮ್ಮೆ. ಇನ್ನೊಂದು ಕಡೆ ದಿಗಿಲು.



ಸುಮಾರು ಕಡಿಮೆ ಅಂದರೂ ವರ್ಷಕ್ಕೆ ಎರಡು ಲಕ್ಷದ ಖರ್ಚು. ಒಟ್ಟು ಐದಾರು ವರ್ಷದ ಅಭ್ಯಾಸ ಅಂದರೆ ಹನ್ನೆರಡು ಲಕ್ಷ ಹೇಗೆ ಹೊಂದಿಸುವುದು? ಕಿರಣ ಆಟೋ ಓಡಿಸುವ ಗೆಳೆಯರನ್ನು ಕೇಳಿದ. ಅವರೆಲ್ಲ ಬಡ್ಡಿ ನಾಗಪ್ಪನ ಹತ್ತಿರ ಕೇಳಲು ಹೇಳಿದರು. ಬಡ್ಡಿ ನಾಗಪ್ಪ ಖುಷಿಯಾಗಿ ಕಿರಣನಿಗೆ.. 'ನೋಡು ಕಿರಣ, ಬೇಕಾದ್ರೆ ಐವತ್ತು ಸಾವಿರದಲ್ಲಿ ಇಪ್ಪತ್ತು ಸಾವಿರ ನಾನು ಬಡ್ಡಿ ಇಲ್ಲದೆ ಕೊಡ್ತೀನಿ. ಬಾಕಿ ಮೂವತ್ತು ಸಾವಿರಕ್ಕೆ ಕಮ್ಮಿ ಅಂದರೂ ತಿಂಗಳಿಗೆ ಒಂಬೈನೂರು ಬಡ್ಡಿ ಕಟ್ಟಬೇಕಾಗುತ್ತೆ. ಆಯ್ತಾ' ಅಂದ. ಕಿರಣ ಲೆಕ್ಕ ಮಾಡುತ್ತ, 'ಸರಿ ಸರ್. ಥ್ಯಾಂಕ್ಸ್' ಹೇಳಿ ಮನೆಯತ್ತ ಆಟೋ ತಿರುಗಿಸಿ ಹೋಗುವಾಗ, ಬಿಷಪ್ ಕಾಟನ್ ಶಾಲೆಯ ವಿದ್ಯಾರ್ಥಿಯ ತಂದೆ ಕಾಮತರು ಸಿಕ್ಕಿ 'ಕಂಗ್ರಾಟ್ಸ್' ಹೇಳಿದರು. ಅವರಲ್ಲಿ ತನ್ನ ತೊಂದರೆಯನ್ನು ಹೇಳಿಕೊಂಡ. ಬ್ಯಾಂಕಿನವರಾದ ಅವರು ಕಿರಣಗೆ ಧೈರ್ಯ ತುಂಬುತ್ತಾ 'ವಿದ್ಯಾರ್ಥಿಗಳಿಗೆ ಬ್ಯಾಂಕ್ ಕಲಿಯಲು ಲೋನ್ ಕೊಡುತ್ತೆ. ನಾಳೆ ನೀನು ಅಡ್ಮಿಶನ್ ಫಾರಂ, ಫೀ ಲೆಟರ್ ಎಲ್ಲ ತಗೊಂಬಾ. ನೋಡೋಣ' ಅಂದರು. ಕಿರಣ ಖುಷಿಯಿಂದ ರಸ್ತೆ ಅನ್ನದೆ ಅವರ ಕಾಲಿಡಿದು ನಮಸ್ಕಾರ ಮಾಡಿದ. 'ನಾಳೆ ಬರ್ತಿನಿ ಸಾರ್' ಅಂತ ಮನೆಗೆ ಮುಟ್ಟಿ.. ಸಂಧ್ಯಾ ಮತ್ತು ಮಗನೊಟ್ಟಿಗೆ ವಿಷಯ ಹೇಳಿದ. ಅವರಿಗಂತೂ ಮಾತೇ ಹೊರಡಲಿಲ್ಲ. ಸಂಧ್ಯಾ ದೇವರ ಫೋಟೋದ ಹತ್ತಿರ ಹೋಗಿ ನಮಸ್ಕರಿಸಿದಳು. ರಾತ್ರಿ ವಠಾರದ ಮಾಲಿಕರಾದ ನಾಗಜ್ಜಿ ಮತ್ತು ಮಗ ಶೇಖರ ಬಂದು ಆದಿತ್ಯನಿಗೆ ಕಂಗ್ರಾಟ್ಸ್ ಅಂದರು. ಮಾತನಾಡುತ್ತ ತಮ್ಮಿಂದ ಆಗುವಷ್ಟು ಸಹಾಯ ಮಾಡುವ ಭರವಸೆ ಕೊಟ್ಟು ಗುಡ್‌ನೈಟ್ ಅಂದರು.


ಕೌಸಲ್ಯಾ ಸುಪ್ರಜಾ ರಾಮ.. ನಿಂದ ಮರುದಿನ ಶುರು ಆಯ್ತು. ಕಾಮತರು ಹೇಳಿದಂತೆ ಎಲ್ಲಾ ಡಾಕ್ಯುಮೆಂಟ್ಸ್ ಹಿಡಿದುಕೊಂಡು ಅಪ್ಪ, ಮಗ, ತಾಯಿ ಮಧ್ಯಾಹ್ನ ಎರಡು ಗಂಟೆಗೆ ಬ್ಯಾಂಕ್ ಮುಟ್ಟಿದರು. ಕಾಮತರು ಅವರನ್ನು ಕಂಡು, ಎಲ್ಲಾ ಡಾಕ್ಯುಮೆಂಟ್ ಪರೀಕ್ಷಿಸಿ ನೇರವಾಗಿ ಮ್ಯಾನೇಜರ್ ಹತ್ತಿರ ಕರೆದೊಯ್ದರು. ಮ್ಯಾನೇಜರ್ ಕಂಗ್ರಾಟ್ಸ್ ಹೇಳುತ್ತ ಎಲ್ಲ ಡಾಕ್ಯುಮೆಂಟ್ ನೋಡಿ, ಒಂದಿಷ್ಟು ಫಾರಂ ತುಂಬಲು ಕೊಟ್ಟರು. ಕಾಮತರು ಅದನ್ನು ತಗೊಂಡು ತಮ್ಮ ಟೇಬಲ್ ಮೇಲೆ ತುಂಬಲು ಶುರು ಮಾಡಿದರು. ಬ್ಯಾಂಕ್ ಸಾಲ ... ಅದನ್ನು ತೀರಿಸುವ ಪದ್ಧತಿ ಎಲ್ಲ ಹೇಳಿದರು. ಆದಿತ್ಯನಿಗೆ ಮನವರಿಕೆ ಮಾಡಿಕೊಟ್ಟರು. ಎರಡು ಗ್ಯಾರಂಟಿ ಕೊಡುವ ಜನ ಬೇಕು. ಒಳ್ಳೆ ನೌಕರಿ ಮಾಡುವ ಒಬ್ಬರು. ಮತ್ತೊಂದು ಯಾರಾದರೂ ಚಿರಾಸ್ತಿ ಇದ್ದವರು. ಗ್ಯಾರಂಟಿ ಕೊಟ್ಟರೆ ಸಂಪೂರ್ಣ ಸಾಲ ಬಹಳ ಬೇಗ ಆಗಬಹುದು. ಗ್ಯಾರಂಟಿ ಇಲ್ಲದಿದ್ದರೆ.. ಸುಮಾರು ಮುಕ್ಕಾಲು ಭಾಗ ಸಾಲ ಸಿಗಬಹುದು ಅಂದರು. 'ಆಯ್ತು ಸರ್ ನೀವು ಫಾರಂ ಅನ್ನುತುಂಬಿ. . ನನ್ನ ಪ್ರಯತ್ನ ಮಾಡುತ್ತೇನೆ' ಅಂದ ಕಿರಣ. ಮನೆಗೆ ಹೋಗುತ್ತಿರುವಾಗ ಆದಿತ್ಯನಿಗೆ ಇನ್ಫೋಸಿಸ್ ಸುವರ್ಣಕ್ಕನ ಫೋನ್ ಬಂತು. ಆದಿತ್ಯನಿಗೆ ಅಚ್ಚರಿ. ಅರೇ... ಇಷ್ಟು ಬೇಗ ನಾಯಕ ನಟಿಯ ಪ್ರವೇಶ ಹೇಂಗೆ ಅಂದಾ. ಸುವರ್ಣ ನಗುತ್ತಾ ಆದಿ.. ಸಂಧ್ಯಾ ಆಂಟಿ, ನನಗೆ ಎಲ್ಲಾ ಹೇಳಿ ಆಯ್ತು. ನಮ್ಮ ಕಂಪನಿಯಲ್ಲಿ ನಿನಗೆ ಬ್ಯಾಂಕ್ ಸಾಲಕ್ಕೆ

*(8ನೇ ಪುಟಕ್ಕೆ)*

*PAGE DONATED BY :* ***SHRI ROKESH HEGDE & FAMILY, DAHISAR***

# ಸರ್ವಾಕರ್ಷಕ 'ಅದಮ್ಯ ಚೇತನ' - ಪ್ರೊ. ಜಿ. ವಿ. ಭಟ್

✍ ಶಂಕರನಾರಾಯಣ ಭಟ್, ಮಾಡಗೇರಿ, ಹೊನ್ನಾವರ




ಕಳೆದ ಜನವರಿ 22ರಂದು, ದಿವೇಕರ್ ಕಾಲೇಜ್ ಆಫ್ ಕಾಮರ್ಸ್ ಕಾಲೇಜಿನಲ್ಲಿ, ಹಳೆ ವಿದ್ಯಾರ್ಥಿಗಳ ಸಂಘ ಹಾಗೂ ಕಾಲೇಜು ಆಯೋಜಿಸಿದ್ದ ಸಮಾರಂಭದಲ್ಲಿ ಬಿಡುಗಡೆಯಾದ ಪುಸ್ತಕದ ಶೀರ್ಷಿಕೆಯೇ ಎಷ್ಟೊಂದು ಆಕರ್ಷಕವಾಗಿತ್ತು! 'ಅದಮ್ಯ ಚೇತನ- ಪ್ರೊ. ಜಿ. ವಿ. ಭಟ್'. ಇದರ ಜತೆ ಮುಖಪುಟದಲ್ಲಿ ಪ್ರಕಟಗೊಂಡ ಜಿ. ವಿ. ಭಟ್ಟರ ಭಾವಚಿತ್ರವಂತೂ ಇನ್ನೂ ಆಕರ್ಷಕವಾಗಿತ್ತು. ಸ್ವತಃ ಅವರ ಎದುರೇ ಕುಳಿತಿರುವ ಅನುಭವ ಆಯಿತು. ಅಷ್ಟೊಂದು ಚೇತೋಹಾರಿ! ಸಂಪೂರ್ಣ ಪುಸ್ತಕ ಅತ್ಯಂತ ಸೊಗಸಾಗಿ ಮೂಡಿಬಂದಿದೆ. ಮುಖಪುಟದ ವಿನ್ಯಾಸದಂತೆ ಒಳಪುಟಗಳ ವಿನ್ಯಾಸವೂ ಸರಳವಾಗಿದ್ದರೂ ಶ್ರೀಮಂತಿಕೆಯನ್ನು ಸೂಚಿಸುತ್ತದೆ. ಪುಸ್ತಕದಲ್ಲಿ ಬಳಸಿದ ಕಾಗದ, ಫಾಂಟ್‌ಗಳು ಕನ್ನಡ - ಇಂಗ್ಲಿಷ್ ಎಂಬ ವಿಭಾಗ, ಪ್ರತಿ ಲೇಖನವೂ ಜಿ. ವಿ. ಭಟ್ಟರ ವಿವಿಧ ಗುಣಗಳ ಅನಾವರಣದಂತಿದೆ.

ಒಬ್ಬರು ಅವರನ್ನು ಚೈತನ್ಯಮೂರ್ತಿ ಅಂದರೆ, ಇನ್ನೊಬ್ಬರು ಬುನಾದಿಯೂ ಹೌದು, ಚಪ್ಪರವೂ ಹೌದು ಅಂದರು. ಮಗದೊಬ್ಬರು ಆದರ್ಶಗುರು, ಮಾರ್ಗದರ್ಶಿ ಅಂದಿದ್ದು, ಇಷ್ಟಕ್ಕೇ ಮುಗಿಯದೇ ಸ್ನೇಹಮಯಿ, ಅಸಾಧಾರಣ ಪ್ರಾಚಾರ್ಯರು, ಧೀಮಂತ ನಮ್ಮ ಗುರು ಉತ್ತಮ ಬಾಳಸಂಗಾತಿ, ಪ್ರೀತಿಯ ಬಾಲ್ಯ ಸ್ನೇಹಿತ ಹಾಗೂ ಅವರ ಕುಟುಂಬದ ಹಿನ್ನೆಲೆ ಮತ್ತು ಸಾಧನೆಗಳನ್ನು ಅನಾವರಣ ಮಾಡಿದ ಲೇಖನಗಳು ಇಲ್ಲಿವೆ.

Tribute to great Guru, A friend in need, A blend of Vision and Compassion ಹೀಗೆ ಜಿ. ವಿ. ಭಟ್ಟರನ್ನು ಕಂಡವರ ಲೇಖನಗಳನ್ನು ಒಳಗೊಂಡಿರುವ ಪುಸ್ತಕವನ್ನು ಓದುವುದೇ ಅತ್ಯಂತ ಖುಷಿಕೊಡುವಂತಹದು. ಇವೆಲ್ಲವುದರ ಜತೆ, ಈ ಹಿಂದೆ ಸ್ವತಃ ಜಿ.ವಿ. ಭಟ್ಟರೇ ಬರೆದ 'ಉನ್ನತ ಶಿಕ್ಷಣದ ಅವಶ್ಯಕತೆ' ಲೇಖನ ಇಂದಿನ ಶಿಕ್ಷಣ ಪದ್ಧತಿಯ ಬದಲಾವಣೆಯ ಅವಶ್ಯಕತೆಯನ್ನೂ ವಿವರಿಸುವಂತಿದೆ.

ಒಬ್ಬ ವ್ಯಕ್ತಿ ಹೇಗಿರಬೇಕು, ಯಾವ ಯಾವ ಗುಣಗಳನ್ನು ಹೊಂದಿರಬೇಕು ಎಂದು ತಿಳಿಯಲೂ ಈ ಪುಸ್ತಕ ಸಹಾಯವಾಗುವಂತಿದೆ. ಅಲ್ಲಲ್ಲಿ ಜಿ.ವಿ. ಭಟ್ಟರು ತಮ್ಮ ಕಾಲಾವಧಿಯಲ್ಲಿ ಎಂತೆಂಥ ಘಟಾನು ಘಟಿಗಳನ್ನು ತಮ್ಮ ಕಾಲೇಜಿಗೇ ಕರೆಯಿಸಿದ್ದರು ಮತ್ತು ಅವರೊಡನೆ ಇಟ್ಟುಕೊಂಡ ಬಾಂಧವ್ಯವನ್ನೂ ಪರಿಚಯಿಸುವಂತಿದೆ. ಇದರ ಜತೆ ಕುಟುಂಬದವರೊಡನೆ, ಹಳೆಯ ವಿದ್ಯಾರ್ಥಿಗಳೊಡನೆ ಕ್ಲಿಕ್ಕಿಸಿಕೊಂಡ ಫೋಟೋಗಳೂ ಇರುವುದು ಅವರ ವೈಯಕ್ತಿಕ ಸಂಬಂಧದ ದ್ಯೋತಕವಾಗಿದೆ.

ಈ ಪುಸ್ತಕ ಇಷ್ಟೊಂದು ಆಕರ್ಷಕವಾಗುವಂತೆ ಮಾಡುವಲ್ಲಿ, ಹಗಲಿರುಳೂ ಶ್ರಮಿಸಿ, ಯಾರ ಯಾರಿಂದ ಯಾವೆಲ್ಲ ಲೇಖನ ಪಡೆಯಬಹುದು, ಯಾವೆಲ್ಲ ಭಾವಚಿತ್ರ ಅಳವಡಿಸಿಕೊಳ್ಳಬೇಕು, ಮುಖಪುಟದಲ್ಲಿ ಯಾವ ಭಾವಚಿತ್ರ ಮತ್ತು ಪುಸ್ತಕದ ಶೀರ್ಷಿಕೆ ಏನಿರಬೇಕು ಎಂಬುದನ್ನೆಲ್ಲ ನಿರ್ಧಾರ ಮಾಡಿದ ಸಂಪಾದಕದ್ವಯರಾದ ಪ್ರೊ. ಜಿ. ವಿ. ಜೋಶಿ ಮತ್ತು ಪ್ರೊ. ಆರ್. ಎಸ್. ಹಬ್ಬು ಅವರ ಪರಿಶ್ರಮವನ್ನು ಕೊಂಡಾಡಲೇಬೇಕು. ಅವರು ಕೊಟ್ಟ ಕಾಳಜಿ, ಸಣ್ಣ ಸಣ್ಣ ವಿಷಯಗಳ ಬಗ್ಗೆ ತಲೆಕೆಡಿಸಿಕೊಂಡಿದ್ದು, ಲೇಖನಗಳಲ್ಲಿ ಒಂದೂ ತಪ್ಪಾಗದಂತೆ ನೋಡಿಕೊಂಡಿದ್ದು ಪ್ರಶಂಸನಾರ್ಹ. ಪುಸ್ತಕ Presentable ಮತ್ತು Readable ಆಗಿ ಮಾಡುವಲ್ಲಿ ಒಳಗೊಂಡ ಎಡಿಟಿಂಗ್ ಮೆಚ್ಚುವಂತಹುದೆ.

ಈ ಪುಸ್ತಕದಲ್ಲಿ ಜಿ. ವಿ. ಭಟ್ಟರು ಉತ್ತಮ ಗುರುವಾಗಿ, ತಂದೆಯಾಗಿ, ಪತಿಯಾಗಿ, ಊರ ಪ್ರಮುಖ ನಾಗರಿಕರಾಗಿ, ಮಾಮನಾಗಿ, ಹಿತಚಿಂತಕರಾಗಿ, ಉತ್ತಮ ಆಡಳಿತಗಾರರಾಗಿ, ಸೇವೆ ಸಲ್ಲಿಸಿದ ಸಂಸ್ಥೆಯ ಆಸ್ತಿಯಾಗಿ, ವಿದ್ಯಾರ್ಥಿಗಳ ಆದರ್ಶ ಶಿಕ್ಷಕರಾಗಿ ಕಂಗೊಳಿಸಿದ್ದಾರೆ ಅಂದರೂ ಅತಿಶಯೋಕ್ತಿ ಆಗಲಾರದು. ❍

---

*(7ನೇ ಪುಟದಿಂದ)*

ಗ್ಯಾರಂಟಿ ನೀಡುವ ವಿಷಯ ಹೇಳಿದ್ದೀನಿ. ಆದಿ.. ಇನ್ನೊಂದು ಸಿಹಿ ಸುದ್ದಿ ಅಂದರೆ ನನಗೆ ಟೀಮ್ ಲೀಡರ್ ಮಾಡಿದ್ದಾರೆ. ಆದಿ ಅವಳಿಗೆ ಮೊದಲು ಮನದಾಳದ ಥ್ಯಾಂಕ್ಸ್ ಹೇಳಿ ಆಮೇಲೆ ಕಂಗ್ರಾಟ್ಸ್ ಅಂದ. ಅಲ್ಲಾ ಅಕ್ಕಾ.. ಸ್ವಘೋಷಿತ ವಠಾರದ ಟೀಮ್ ಲೀಡರ್ ಆಗಿ ಹತ್ತು ವರ್ಷದ ಎಕ್ಸ್ಪೀರಿಯೆನ್ಸ್, ಕೆಲಸಕ್ಕೆ ಬಂತಾ!! ಸುವರ್ಣ ಫೋನಲ್ಲೇ ಸಂಧ್ಯಾ ಆಂಟೀ.. ಕಿರಣ ಅಂಕಲ್ ಅಂತ ಕಂಪ್ಲೇಂಟ್ ರಾಗ ಸುರು ಮಾಡಿದಳು. ಸಂಧ್ಯಾ ಮತ್ತು ಕಿರಣ ನಗುತ್ತ 'ಥ್ಯಾಂಕ್ಸ್ ಪುಟ್ಟಾ.. ನಿಮ್ಮ ಮನೆಯಲ್ಲಿ ಒಪ್ಪಿಗೆ ತೆಗೆದುಕೊಂಡು ನಂತರ ಬ್ಯಾಂಕ್‌ಗೆ ಬಾ. ಕಾಳಜಿ ಬೇಡ. ಟೀಮ್ ಲೀಡರ್ ಆಗಿದ್ದಕ್ಕೆ ಕಂಗ್ರಾಟ್ಸ್. ನಿಂಗೆ ರಾತ್ರಿ ಐಸ್‌ಕ್ರೀಮ್ ಕೊಡಿಸ್ತೀನಿ'.

ವಠಾರಕ್ಕೆ ಬಂದು ನಡೆದ ಕತೆಯನ್ನೆಲ್ಲ ನೆರೆಹೊರೆಯವರ ಹತ್ತಿರ ಹೇಳಿದ. ಹೂವಿನ ಹಾರ ಕಟ್ಟುವಾಗ ಸಂಧ್ಯಾ ಗುಂಪಿನಲ್ಲಿ ಹೇಳಿಕೊಂಡಳು. ರಾತ್ರಿ ಕಿರಣನೊಡನೆ ಸಂಧ್ಯಾ 'ರೀ.. ಚೀಟಿ ಮಾದೇಶ ಅಣ್ಣಾ ಇಪ್ಪತ್ತು ಸಾವಿರ ಕೊಡುತ್ತಾನೆ. ಸ್ವಲ್ಪ ಚಿನ್ನ ಇದೆ. ಮಾರಾಟ ಮಾಡಿದರಾಯ್ತು'. ಅಂತೆಲ್ಲ ಹೇಳಿದಳು. 'ನೋಡುವ ದೇವರ ಇಚ್ಛೆ' ಅಂದ ಕಿರಣ. ಸಂಧ್ಯಾ 'ರೀ.. ಇಂದು ಚಂದ್ರಗ್ರಹಣ. ಗ್ರಹಣ ಬಿಟ್ಟ ಮೇಲೆ ದೇವರಿಗೆ ದೀಪ ಹಚ್ಚಿ ಉಣ್ಣುವಾ' ಅನ್ನುವಾಗಲೇ ಬಾಗಿಲು ತಟ್ಟಿದ ಸದ್ದು ಆಯ್ತು. ಯಾರಪ್ಪ ಈ ಹೊತ್ತಿಗೆ? ಅಂತ ಹೇಳುತ್ತಾ ಬಾಗಿಲು ತೆಗೆದು ಹೊರಗಡೆ ಬಂದು ನೋಡಿದರೆ ನಾಗಜ್ಜಿ ಮತ್ತು ಅವರ ಮಗ ಶೇಖರ. 'ಮನೆಯ ಬಾಡಿಗೆ ನಾಳೆ ಕೊಡ್ತೀನಿ ಸರ್' ಅಂದ. ನಾಗಜ್ಜಿ ನಕ್ಕಳು. 'ಅದಕ್ಕಲ್ಲಪ್ಪ ನಾವು ಬಂದಿದ್ದು ಕಿರಣ. ಬ್ಯಾಂಕ್‌ಗೆ ಹೋಗಿದ್ದ ಸುದ್ದಿ ಅಮ್ಮನಿಂದ ಗೊತ್ತಾಯ್ತು. ನಾವಿದ್ದೇವೆ ನಿಮ್ಮೊಂದಿಗೆ.. ಅಮ್ಮ ಹೇಳಿದ ಮೇಲೆ ಮುಗಿಯಿತು. ನಾನು ನಾಳೇನೇ ಖಾತಾ ಪೇಪರ್ ತರ್ತೀನಿ. ಗ್ಯಾರಂಟಿ ಕೊಡ್ತೀನಿ.. ವಠಾರದ ಗೌರವದ ದಿನ. ಕಾಳಜಿ ಮಾಡ್ಬಾರ್ದು' ಅಂದ. ಕಿರಣ.. ಸಂಧ್ಯಾರಿಗೆ ಒಮ್ಮೆಲೇ ಕಾರ್ಮೋಡದ ಹಿಂದೆ ಅವಿತುಕೊಂಡಿದ್ದ ಗ್ರಹಣ ಮುಕ್ತ ಚಂದ್ರನ ದರ್ಶನವಾಯಿತು. ನವಿರಾದ ತಂಪಿನ ಗಾಳಿ ಓಲಾಡಿತ್ತು. ಸಂಧ್ಯಾ ನಾಗಜ್ಜಿಯನ್ನು ಅಪ್ಪಿ ಬಿಕ್ಕಿ ಬಿಕ್ಕಿ ಅತ್ತಳು. ನಾಗಜ್ಜಿ 'ಅಯ್ತು ಮಗಾ.. ದೇವರಿಗೆ ದೀಪ ಹಚ್ಚಿ ಊಟ ಮಾಡಮ್ಮ' ಅಂದರು. ಸಂಧ್ಯಾಕಿರಣ.. ದೇವರಿಗೆ ದೀಪ ಹಚ್ಚಿ ಮಗ ಆದಿತ್ಯನೊಡನೆ ದೇವರಿಗೆ ನಮಸ್ಕಾರ ಮಾಡಿದರು. ವಿಷ್ಣವೇ ನಮಃ. ❍

*PAGE DONATED BY : **SHRI ANANT GANESH BHAT, BANDRA & FAMILY***

# ಡಾ. ಕೆ. ಎಸ್. ಪವಿತ್ರ

(ಹವ್ಯಕ ಮಹಿಳಾ ಸಮಾವೇಶದಲ್ಲಿ ವಿಶೇಷ ಅತಿಥಿಯಾಗಿ ಆಗಮಿಸಲಿರುವ ಪ್ರತಿಭಾನ್ವಿತ ಹವ್ಯಕ ಮಹಿಳೆ ಡಾ. ಕೆ. ಎಸ್. ಪವಿತ್ರ ಅವರ ಕಿರು ಪರಿಚಯ)

ಈ ಟಿ. ವಿ. ವಾಹಿನಿಯಿಂದ 'ಪರಿಪೂರ್ಣ ಮಹಿಳೆ' ಎಂಬ ಗೌರವಕ್ಕೆ ಪಾತ್ರರಾಗಿರುವ ಡಾ. ಕೆ. ಎಸ್. ಪವಿತ್ರ ಅವರದ್ದು ಬಹುಮುಖ ಪ್ರತಿಭೆ. ಮೈಸೂರು ವೈದ್ಯಕೀಯ ಮಹಾವಿದ್ಯಾಲಯದಿಂದ ಎಂ. ಬಿ. ಬಿ. ಎಸ್. ಪದವಿ, ಅಂತರಾರಾಷ್ಟ್ರೀಯ ಖ್ಯಾತಿಯ ನಿಮ್ಹಾನ್ಸ್‌ನಿಂದ ಎಂ. ಡಿ. ಪದವಿ, ಭರತನಾಟ್ಯದಲ್ಲಿ ವಿದ್ವತ್ ಪದವಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಿಂದ ಎಂ. ಎ. (ಕನ್ನಡ) ಮತ್ತು ಎಂ. ಎ. (ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ) ಪದವಿಗಳು, ಎರಡು ಚಿನ್ನದ ಪದಕ ಮತ್ತು ಪ್ರಥಮ ರ್‍ಯಾಂಕ್‌ಗಳೊಂದಿಗೆ ಇವು ಡಾ. ಪವಿತ್ರ ಅವರಲ್ಲಿ ಭಾವನಾತ್ಮಕ, ಬೌದ್ಧಿಕ ಪ್ರತಿಭೆಗಳು ಮೇಳೈಸಿರುವುದಕ್ಕೆ ಸಾಕ್ಷಿ.



ಮನೋವೈದ್ಯೆ, ಸಂಶೋಧಕಿ, ಕಲಾವಿದೆ, ನೃತ್ಯ ಸಂಯೋಜಕಿ, ಸಮರ್ಥ ಆಯೋಜಕಿ, ಗುರು ಹೀಗೆ ವಿವಿಧ ಜವಾಬ್ದಾರಿಗಳನ್ನು ಏಕಕಾಲದಲ್ಲಿ ಡಾ. ಪವಿತ್ರ ನಿರ್ವಹಿಸುತ್ತಿದ್ದಾರೆ. ಶಿವಮೊಗ್ಗದಲ್ಲಿದ್ದುಕೊಂಡೇ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲೂ ಕ್ರಿಯಾಶೀಲೆ.

ಸಾಹಿತ್ಯ ಕೃಷಿ ಅವರ ಗಂಭೀರ ಆಸಕ್ತಿ. ಅವರ ಎರಡು ವೃತ್ತಿಗಳಾದ ಮನೋವೈದ್ಯಕೀಯ, ನೃತ್ಯ ಇವೆರಡರ ಅವಿಭಾಜ್ಯ ಅಂಗ ಕೂಡ. ಮಹಿಳೆಯರ ಮತ್ತು ಮಕ್ಕಳ ಮಾನಸಿಕ ಆರೋಗ್ಯ, ನರ- ಮಾನಸಿಕ ಆರೋಗ್ಯ, ಕಲೆ ಮತ್ತು ಮಾನಸಿಕ ಆರೋಗ್ಯ ಅವರ ಸಂಶೋಧನಾ ಕ್ಷೇತ್ರಗಳು. ಕಲೆ, ಸಾಹಿತ್ಯ, ಮಾನಸಿಕ ಆರೋಗ್ಯ ಈ ಮೂರೂ ಕ್ಷೇತ್ರಗಳಲ್ಲಿ ಸಂಶೋಧನೆ ಪ್ರಯೋಗಗಳಿಂದ ಕ್ರಿಯಾಶೀಲರಾಗಿದ್ದಾರೆ.

ಸೃಜನಶೀಲತೆ ಮತ್ತು ಮಾನಸಿಕ ಆರೋಗ್ಯ ಕುರಿತ ಮಹಾಪ್ರಬಂಧ, ಜಪಾನ್, ಹಾಂಕಾಂಗ್, ಬೀಜಿಂಗ್, ಮೆಲ್ಬೋರ್ನ್‌ಗಳಲ್ಲಿ ಅಂತಾರಾಷ್ಟ್ರೀಯ ಫೆಲೋಶಿಪ್‌ಗಳು, ಕನಕದಾಸರ ಸಾಹಿತ್ಯ ಮತ್ತು ಸಂಗೀತ ಕುರಿತ ಸಂಶೋಧನಾ ಫೆಲೋಶಿಪ್, 'ಪ್ರಾಚೀನ ಕನ್ನಡ ಸಾಹಿತ್ಯ ಮತ್ತು ನೃತ್ಯ ಮಾರ್ಗ' ಕುರಿತು ಭಾರತೀಯ ಸಾಂಸ್ಕೃತಿಕ ನಿರ್ದೇಶನಾಲಯ ಯುವ ಸಂಶೋಧಕರಿಗೆ ನೀಡುವ ಫೆಲೋಶಿಪ್, ಪಠ್ಯೇತರ ಚಟುವಟಿಕೆಗಳು ಮತ್ತು ಶೈಕ್ಷಣಿಕ ಬೆಳವಣಿಗೆ ಕುರಿತ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಫೆಲೋಶಿಪ್, ಯೂನಿಸೆಫ್ ಮೀಡಿಯಾ ಫೆಲೋಶಿಪ್ ಹಾಗೂ ಕಾವ್ಯಕನ್ನಿಕಾ (ಮಹಿಳಾ ಕಾವ್ಯದ ನೃತ್ಯಾಭಿವ್ಯಕ್ತಿ), ಕ್ರಿಸ್ತಕಾವ್ಯ, ಜಿನಪಥ (ಕನ್ನಡ ಜೈನ ಸಾಹಿತ್ಯ), ಔದುಂಬರ ಗಾಥಾ ನಿರ್ಮಾಣಗಳಿಗಾಗಿ ಭಾರತೀಯ ಸಾಂಸ್ಕೃತಿಕ ನಿರ್ದೇಶನಾಲಯ ನವದೆಹಲಿಯಿಂದ ವೈಯಕ್ತಿಕ ನಿರ್ಮಾಣ ಅನುದಾನ ಡಾ. ಪವಿತ್ರ ಅವರಿಗೆ ಲಭಿಸಿದೆ.

ಗುರು ಡಾ. ವಸುಂಧರಾ ದೊರೆಸ್ವಾಮಿಯವರ ಶಿಷ್ಯೆಯಾಗಿ, ಪಂದನಲ್ಲೂರು ಶೈಲಿಯ ಭರತನಾಟ್ಯವನ್ನು ಡಾ. ಪವಿತ್ರ ಆಳವಾಗಿ ಅಭ್ಯಸಿಸಿದ್ದಾರೆ. ಭರತನಾಟ್ಯ ಕಲಾವಿದೆ, ಸಂಯೋಜಕಿಯಾಗಿ ರಾಷ್ಟ್ರೀಯ, ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಡಾ. ಪವಿತ್ರ ನಿರ್ದೇಶಿಸಿ ಪ್ರಸ್ತುತಪಡಿಸಿರುವ ನೃತ್ಯರೂಪಕಗಳು ಸಂಶೋಧನಾತ್ಮಕ ಸೃಜನಶೀಲ ನೆಲೆಯಲ್ಲಿ ರೂಪುಗೊಂಡಿರುತ್ತವೆ. ಈ ನೃತ್ಯ ಪ್ರಸ್ತುತಿಗಳು ರಾಜ್ಯ, ದೇಶ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನ ಕಂಡಿವೆ. ನೃತ್ಯಕ್ಕೆ ಪೂರಕವಾಗಿ ಕೇರಳದ ಕಲರಿಪಯಟ್ ಎಂಬ ಸಮರಕಲೆಯನ್ನು ಡಾ. ಪವಿತ್ರ ಅಭ್ಯಸಿಸಿದ್ದಾರೆ.

ಡಾ. ಪವಿತ್ರ ಮಹಿಳೆಯರ ಮತ್ತು ಮಕ್ಕಳ ಮಾನಸಿಕ ಆರೋಗ್ಯ, ಸಾಮಾನ್ಯ ಮಾನಸಿಕ ಆರೋಗ್ಯ, ವ್ಯಕ್ತಿತ್ವ ವಿಕಸನ ಮಾಲೆ, ಸಂಶೋಧನಾ ಗ್ರಂಥ, ನೃತ್ಯ ಮತ್ತು ಮಾನಸಿಕ ಆರೋಗ್ಯ, ಪ್ರವಾಸ ಕಥನ ಹೀಗೆ ವಿವಿಧ ವಿಷಯಗಳಲ್ಲಿ 52 ಪುಸ್ತಕಗಳನ್ನು ರಚಿಸಿದ್ದಾರೆ. ನಾಡಿನ ಎಲ್ಲ ಪ್ರಮುಖ ಪತ್ರಿಕೆಗಳಲ್ಲಿ ಪವಿತ್ರ ಅವರ ಮನೋವೈದ್ಯಕೀಯ, ಸಾಹಿತ್ಯಿಕ ಮತ್ತು ನೃತ್ಯಕ್ಕೆ ಸಂಬಂಧಿಸಿದ ಲೇಖನಗಳು ಪ್ರಕಟವಾಗಿವೆ. ವಿವಿಧ ಪತ್ರಿಕೆಗಳಲ್ಲಿ ಅವರ ಅಂಕಣಗಳಾದ 'ಮನದ ಮಾತು', 'ಹೆಣ್ಣು ಹೆಜ್ಜೆ', 'ಮನೋವಿಹಾರ', 'ಹದಿ ಹೃದಯ ಕುದಿಹರೆಯ' ವಿಶೇಷವಾಗಿ ಜನಪ್ರಿಯವಾಗಿದೆ.

ಹಲವು ರಾಷ್ಟ್ರೀಯ, ರಾಜ್ಯ ಮತ್ತು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಡಾ. ಪವಿತ್ರ ಅವರ ಸಾಧನೆ, ಸಂಶೋಧನೆಗಳಿಗಾಗಿ ನೀಡಲಾಗಿದೆ. ಆರು ಬಾರಿ ವಿವಿಧ ಸಾಹಿತ್ಯ ಕೃತಿಗಳಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ದತ್ತಿನಿಧಿ ಪ್ರಶಸ್ತಿ, ಎರಡು ಬಾರಿ ಅರಳು ಪ್ರಶಸ್ತಿ, ಎರಡು ಬಾರಿ ಕರ್ನಾಟಕ ಲೇಖಕಿಯರ ಸಂಘದ ದತ್ತಿನಿಧಿ ಪ್ರಶಸ್ತಿ, ಬೇಂದ್ರೆ ಗ್ರಂಥ ಬಹುಮಾನ, ವಿಶ್ವೇಶ್ವರಯ್ಯ ರಾಷ್ಟ್ರೀಯ ಪ್ರಶಸ್ತಿ, ಕುವೆಂಪು ವೈದ್ಯ ಸಾಹಿತ್ಯ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 'ಸಂದೇಶ' ರಾಜ್ಯ ಪ್ರಶಸ್ತಿ, ಮಹಿಳಾ ಸಂಶೋಧಕರಿಗೆ ನೀಡಲಾಗುವ ಸಂವೇದನಾ ಪ್ರಶಸ್ತಿ, ಮಕ್ಕಳ ಮನೋವೈದ್ಯಕೀಯ ಕ್ಷೇತ್ರದಲ್ಲಿನ ಅವರ ಸೇವೆಯನ್ನು ಗುರುತಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ರಾಜ್ಯ ಪ್ರಶಸ್ತಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿ, ಅಕಲಂಕ ಪ್ರಶಸ್ತಿ ಇವುಗಳಲ್ಲಿ ಪ್ರಮುಖವಾದವು. ಸೃಜನಶೀಲತೆ ಮತ್ತು ಮಾನಸಿಕ ಆರೋಗ್ಯದ ಬಗೆಗಿನ ಅವರ ಕೊಡುಗೆಗಾಗಿ 2016 ರಲ್ಲಿ ಚೆನ್ನೈನ ಪ್ರತಿಷ್ಠಿತ ಡಾ. ಎಂ. ವೈದ್ಯ ಲಿಂಗಂ ಉಪನ್ಯಾಸ ಗೌರವ ಪಡೆದ ಅತಿ ಕಿರಿಯ ವೈದ್ಯೆ ಮತ್ತು ಪ್ರಥಮ ಮಹಿಳೆಯಾಗಿದ್ದಾರೆ. ಜೂನ್ 8, 2017ರಂದು ಧಾರವಾಡದಲ್ಲಿ ನಡೆದ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಸಮಾರಂಭದಲ್ಲಿ ಮುಖ್ಯಮಂತ್ರಿಗಳಿಂದ ಫೆಲೋಶಿಪ್ ಗೌರವ ಸ್ವೀಕರಿಸಿದ್ದಾರೆ. ಭಾರತ ಸರ್ಕಾರದ ಸಂಸ್ಕೃತಿ ಇಲಾಖೆ ನೀಡುವ ಸಂಶೋಧನಾ ಫೆಲೋಶಿಪ್, ನೃತ್ಯ ಚಿಕಿತ್ಸೆಗಾಗಿ ಡಾ. ಪವಿತ್ರ ಅವರಿಗೆ 2022ನೇ ಸಾಲಿಗೆ ದೊರಕಿದೆ. ಕರ್ನಾಟಕದ ಮಾನ್ಯ ರಾಜ್ಯಪಾಲರಿಂದ ಮೂರು ವರ್ಷಗಳ ಅವಧಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದ ವಿಜ್ಞಾನ, ಇತಿಹಾಸ ವಿಭಾಗದ ಅಧ್ಯಯನ ಮಂಡಳಿಯ ಸದಸ್ಯರಾಗಿ ನೇಮಿಸಲ್ಪಟ್ಟಿದ್ದಾರೆ.

ಭಾರತೀಯ ಮನೋವೈದ್ಯ ಸಂಘದ ಸೃಜನಶೀಲತೆ ಮತ್ತು ಮಾನಸಿಕ ಆರೋಗ್ಯದ ಕಾರ್ಯಪಡೆಯ ರಾಷ್ಟ್ರೀಯ ಕಾರ್ಯಾಧ್ಯಕ್ಷೆಯಾಗಿ ಕಳೆದ ಐದು ವರ್ಷಗಳಿಂದ ಡಾ. ಪವಿತ್ರ ಸೇವೆ ಸಲ್ಲಿಸುತ್ತಿದ್ದಾರೆ. 2017ರಲ್ಲಿ ಭಾರತ ಸರ್ಕಾರದ ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಪಾಲ್ಗೊಳ್ಳಲು ಆಯ್ಕೆಯಾಗಿರುವ ಮೂವತ್ತೈದು ರಾಷ್ಟ್ರೀಯ ಕಲಾವಿದರಲ್ಲಿ ಡಾ. ಪವಿತ್ರಾ ಸೇರಿದ್ದಾರೆ.

*PAGE DONATED BY :* ***SHRI V. G. BHAT, NIGDI***

# Thinking of Risk before Return

✍ **Vinod N. Bhat**

**Goal-oriented Solutions**

'Hey Siddharth, how are you doing? It's been so long since we last spoke,' Gautam said excitedly as he hugged Siddharth. They had met at a family event of one of their common friends.

'Yes Gautam, I know. We are meeting for the first time since we passed out from our school thirty years ago. How are you?'

'I am doing well. I have not been in one place and have moved across multiple places for my job. That's why I haven't been able to meet up as much as I would have liked to.'

'So, what do you do?'

'Software, what else? That was the opportunity for us back then. How about you?

'I am a financial advisor.'

'That's great. I've met you at the right time. I wanted some advice regarding planning for retirement.'

'Sure. Why don't we meet over the weekend and discuss. But do send me some details about your savings and investments first. I'd like to go through them before we speak.'

'Of course, I'll do that.'

Over the next few days, Gautam put together the details and sent them to Siddharth.

Siddharth was shocked to see his friend's portfolio. Even after working for almost 25 years, the value of Gautam's investments excluding his primary residence was less than Rs 1 crore.

When they met that weekend, Siddharth gave an honest evaluation and informed Gautam that he was concerned.

'Gautam, you work in a private firm and won't have the luxury of a pension after retirement. You need a sizeable corpus to take care of your expenses which will keep increasing from now till you retire due to inflation.'

'I know that. But what should I do?'

'First, I'd like you to understand what you have done. I see that you have invested in stocks. But your overall portfolio doesn't show much profit as the quality of stocks is not good. Have you lost money trading stocks?'

'Unfortunately yes. I have been investing and trading in stocks for the past decade without much success.'



'That's called speculation. You have heard of Mutual Funds, right?

'I have and I do have a few mutual funds in my portfolio.'

'But that's a very small portion of your portfolio. And it's largely midcap and smallcap funds. You don't have an appropriate asset allocation. If you continue like this, you will not be able to retire.'

'Are you serious?'

'I am dead serious! Please make sure you maintain good relations with your boss.'

'Oh. I didn't realize the situation was so bad. How can I be better prepared going forward. I am willing to follow your advice.'

'Well, to keep things simple, you can consider some goal-oriented solutions. Since your goal is a comfortable retirement in a decade, you need to invest in some Mutual funds which will take you towards that goal.'

'OK. What would be some examples of such funds?

'Multi-asset Allocation Funds and Retirement Funds are two examples of funds you can consider.'

'Could you please explain in detail?'

'Sure. Multi-asset allocation funds provide you a well-diversified portfolio across stocks, bonds, Commodities like Gold and Silver, as well as Real Estate. And Retirement Funds are a bit more conservative as they invest only in stocks and bonds.'

'What advantage do they provide?'

'They are both lower risk than pure Equity Mutual Funds due to the negative correlation between these asset classes but they have a good chance to provide a reasonably good return. Given that you are planning for retirement, these funds which provide a suitable asset allocation would be more suitable for you.'

Thanks Siddharth, I will take your advice and invest in these funds only,' Gautam promised Siddharth.

*(to be continued)*

[Vinod Bhat is the author of the book **'The Financial Independence Marathon'** which has been recently published by Penguin India. Readers can refer to the book for many such golden nuggets. The book is available on Amazon.in at : https://www.amazon.in/Financial-Independence-Marathon-Unlock-Power/dp/0143459988]

*PAGE DONATED BY : **SHRI RAMANA BHAT MULUND AND FAMILY***

# HAVYAKA WELFARE TRUST MUMBAI

## ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ



# HAVYAKA WOMEN CONVENTION

## ಹವ್ಯಕ ಮಹಿಳಾ ಸಮಾವೇಶ

**Date : 16.6.2024, Sunday   Time : 10.00 a.m. onwards**

**Venue : HAVYAKARA SABHAGRAHA, Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.**

*Chief Guest :* **Smt. Savita Rao (Senior Audit Officer, Indian Audit and Accounts Dept., Under Controller & Auditor General of India, Mumbai)**

***Chairperson / ಸಭಾಧ್ಯಕ್ಷರು :***

**Shri Shivkumar Bhagwat (President, Havyaka Welfare Trust, Mumbai)**

ಶ್ರೀ ಶಿವಕುಮಾರ್ ಭಾಗವತ್ (ಅಧ್ಯಕ್ಷರು, ಹವ್ಯಕ ವೆಲ್ಫೇರ್ ಟ್ರಸ್ಟ್, ಮುಂಬಯಿ)

***Special Guest / ವಿಶೇಷ ಅತಿಥಿ :***

**Dr. K.S. Pavitra (Psychiatrist, Writer, Classical Dancer)**

ಡಾ. ಕೆ. ಎಸ್. ಪವಿತ್ರ (ಮನೋವೈದ್ಯೆ, ಲೇಖಕಿ, ಭರತನಾಟ್ಯ ಕಲಾವಿದೆ)

**–: PROGRAMME DETAILS / ಕಾರ್ಯಕ್ರಮಗಳ ವಿವರ :–**

**9.30 a.m. to 10.00 a.m. / ಬೆಳಿಗ್ಗೆ 9.30 ರಿಂದ 10.00**

**Registration & Breakfast / ನೋಂದಣಿ ಮತ್ತು ಉಪಾಹಾರ**

**Stage Programme - ಸಭಾ ಕಾರ್ಯಕ್ರಮ**

**Presentation (Dance) by Dr. K. S. Pavitra / ನೃತ್ಯಮುಖೇನ ಪ್ರಸ್ತುತಿ ಡಾ. ಕೆ. ಎಸ್. ಪವಿತ್ರ ಅವರಿಂದ**

**Women's Mental Health/ ಮಹಿಳೆಯರ ಮಾನಸಿಕ ಆರೋಗ್ಯ**

**Felicitation of the Elderly Women and Special Achiever**

ಹಿರಿಯ ಮಹಿಳೆಯರು ಮತ್ತು ವಿಶೇಷ ಸಾಧಕರಿಗೆ ಸನ್ಮಾನ

**10.00 a.m. to 1.30 p.m. / ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.30 ರ ವರೆಗೆ**

**Lunch Break /1.30 p.m. to 2.30 p.m. / ಊಟದ ವಿರಾಮ ಮಧ್ಯಾಹ್ನ 1.30 ರಿಂದ 2.30**

**CULTURAL PROGRAMME - 2.30 p.m. onwards / ಸಾಂಸ್ಕೃತಿಕ ಕಾರ್ಯಕ್ರಮ –ಮಧ್ಯಾಹ್ನ 2.30 ರಿಂದ**

**Fancy Dress Competition for Women / ಮಹಿಳೆಯರಿಗಾಗಿ ಫ್ಯಾನ್ಸಿಡ್ರೆಸ್ ಸ್ಪರ್ಧೆ**

**(Time limit for Fancy Dress Competition is 1 to 1½ min)**

(ಫ್ಯಾನ್ಸಿ ಡ್ರೆಸ್ ಸ್ಪರ್ಧೆಗೆ ಕೇವಲ ಒಂದರಿಂದ ಒಂದೂವರೆ ನಿಮಿಷದ ಕಾಲಾವಧಿ)

**Skit-Light Comedy Skit with a message to the society is preferable (10-12 minutes)**

ಲಘು ಹಾಸ್ಯದೊಂದಿಗೆ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಸ್ಕಿಟ್‌ಗೆ ವಿಶೇಷ ಆದ್ಯತೆ

**Decorated Aarati Thaali Competition / ಅಲಂಕೃತ ಆರತಿ ಬಟ್ಟಲು ಸ್ಪರ್ಧೆ**

***Hearty Welcome to all / ಎಲ್ಲರಿಗೂ ಆದರದ ಸ್ವಾಗತ***

***Those who are interested to participate in cultural programme & competitions, please register your name before 12th June, 2024***

***Contact details :***

**Shanta Bhat - 7208171617 • Amita Bhagwat - 9819324284 •Tanuja Hegde - 8169515822 •Shashikala Hegde - 9869015917 • Hema Hegde - 7715950112 •Sumitra Bhat - 8459744395 • Shobha Bhat - 9821117715, Poornima Akadas -9821212299**

*PAGE DONATED BY : **SHRI G. V. HEGDE MULUND AND FAMILY***

# ಮಾಸ ಭವಿಷ್ಯ

✍ ಶ್ರೀಪತಿ ಭಟ್

**ಮೇಷ :** ನಿಮ್ಮ ಸಹಭಾಗಿಗೆ ಅಥವಾ ಮಕ್ಕಳಿಗೆ ಸಹಾಯ ಮಾಡುವುದರಲ್ಲಿ ಈ ದಿನ ನಿಮಗೆ ಹೆಚ್ಚು ಆನಂದ ಆಗಬಹುದು. ಆಧ್ಯಾತ್ಮದ ಬಗೆಗಿನ ನಿಮ್ಮ ಚಿಂತನೆಯು ಜೀವನೋತ್ಸಾಹ ಮತ್ತು ಧೈರ್ಯವನ್ನು ವೃದ್ಧಿಸುತ್ತದೆ. (ಶುಭ ಸಂಖ್ಯೆ 8) [ಶಿವನಿಗೆ ಬೆಲ್ಲದಾರತಿ ಮಾಡಿ]

**ವೃಷಭ :** ಬಹುಭಾಷಾ ಚಲನ ಚಿತ್ರರಂಗದವರಿಗೆ ಒಳ್ಳೆಯ ಖ್ಯಾತಿ ದೊರೆಯುವುದು. ದೇವತಾನುಗ್ರಹದಿಂದ ನೀವು ಮಾಡುವ ಕೆಲಸದಲ್ಲಿ ಒಳ್ಳೆಯ ಲಾಭವನ್ನು ಪಡೆಯುವಿರಿ. ಆರೋಗ್ಯದ ಬಗೆಗೆ ಹೆಚ್ಚಿನ ಕಾಳಜಿ ವಹಿಸಿ. (ಶುಭ ಸಂಖ್ಯೆ 6) [ದುರ್ಗಾ ಸಪ್ತಸತಿ ಪಠಿಸಿ]

**ಮಿಥುನ :** ಸಂಸಾರ ನಿರ್ವಹಣೆ ಸುಲಭವೆನಿಸುವುದಿಲ್ಲ. ಉದ್ಯೋಗ ಬದಲಾವಣೆ ವಿಚಾರದಲ್ಲಿದ್ದ ಗೊಂದಲವನ್ನು ನಿವಾರಿಸಿಕೊಳ್ಳುವಿರಿ. ಶಸ್ತ್ರ ಚಿಕಿತ್ಸೆ ಮಾಡಿಸಲು ವಿಶ್ವಾಸಿಗಳಿಂದ ವೈದ್ಯರ ಸಂಪರ್ಕ ದೊರೆಯುವುದು. (ಶುಭ ಸಂಖ್ಯೆ 4) [ಕೃಷ್ಣನಿಗೆ ಬೆಣ್ಣೆ ನೈವೇದ್ಯ ಮಾಡಿ]

**ಕರ್ಕಾಟಕ :** ನೀರಿನ ಸಂಬಂಧದ ವ್ಯವಹಾರದಲ್ಲಿರುವವರಿಗೆ ಧನ ಲಾಭವಾಗುವುದು. ತಾಂತ್ರಿಕ ಕ್ಷೇತ್ರದಲ್ಲಿನ ನಿಮ್ಮ ಪ್ರಯತ್ನಗಳಿಂದ ಉತ್ತಮ ಉದ್ಯೋಗ ಗಳಿಸುವಿರಿ. ಸಕಾಲಕ್ಕೆ ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. (ಶುಭ ಸಂಖ್ಯೆ 1) [ಬನಶಂಕರಿ ಅಮ್ಮನವರಿಗೆ ಕಬ್ಬಿನ ಹಾಲಿನ ಅಭಿಷೇಕ ಮಾಡಿರಿ]

**ಸಿಂಹ :** ಕೆಲಸ ಕಾರ್ಯದಲ್ಲಿ ಅಧಿಕ ಹಣ ವ್ಯಯವಾದರೂ, ಮುಂದಿನ ದಿನಗಳ ಬಗೆಗಿನ ದೂರ ದೃಷ್ಟಿ ಇಟ್ಟುಕೊಂಡು ಕಾರ್ಯಪ್ರವೃತ್ತರಾಗುವುದು ಉತ್ತಮ. ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳುವಿರಿ. (ಶುಭ ಸಂಖ್ಯೆ 5) [ಗಣಪತಿಗೆ ಗರಿಕೆ ಹಾರ ಹಾಕಿ]

**ಕನ್ಯಾ :** ಗಣ್ಯ ವ್ಯಕ್ತಿಯೊಬ್ಬರನ್ನು ಭೇಟಿಯಾಗುವ ಸಂದರ್ಭ ಬರುವುದು. ನೆಮ್ಮದಿಯ ಬದುಕಿಗೆ ಬೇಕಾದ ಹಣದ ಅಭಾವ ಇರುವುದಿಲ್ಲ. ಕಣ್ಣಿನ ದೃಷ್ಟಿಯಲ್ಲಿ ಬದಲಾವಣೆ ಅನುಭವಕ್ಕೆ ಬಂದಲ್ಲಿ ವೈದ್ಯರನ್ನು ಭೇಟಿ ಮಾಡಿ. (ಶುಭ ಸಂಖ್ಯೆ 2) [ಗಣಪತಿಗೆ ಕರಿಜೀಕಾಯಿ ನೈವೇದ್ಯ ಮಾಡಿಸಿ]

**ತುಲಾ :** ಆರ್ಥಿಕ ತಾಪತ್ರಯಗಳು ಹೇಳಿಕೊಳ್ಳಲಾಗದಂತಾಗಲಿದೆ. ಬಹಳ ದಿನಗಳ ನಂತರ ಹಿಂದಿನಿಂದ ಬಾಕಿ ಇರುವ ಮನೆ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು. ಆದ್ದರಿಂದ ಶುಭವಾಗುವುದು. (ಶುಭ ಸಂಖ್ಯೆ 9) [ನವಗ್ರಹ ಶಾಂತಿ ಮಾಡಿಸಿ]

**ವೃಶ್ಚಿಕ :** ಬ್ಯಾಂಕ್ ಉದ್ಯೋಗಕ್ಕಾಗಿ ಮಾಡಿದ ಪ್ರಯತ್ನ ವ್ಯರ್ಥ ವಾದಂತಾಗುತ್ತದೆ. ರಾಜಕೀಯ ವಿದ್ಯಾಮಾನಗಳನ್ನು ಎಚ್ಚರಿಕೆಯಿಂದ ಗಮನಿಸಿ. ಸಂಜೆಯ ಸಮಯದ ಪುಟ್ಟದೊಂದು ಪ್ರಯಾಣ ಇರುವುದು. (ಶುಭ ಸಂಖ್ಯೆ 3) [ದೇವಿಗೆ ಮಡಿಲಕ್ಕಿ ತುಂಬಿಸಿ]

**ಧನು :** ಮನೆಗಾಗಿ ವಿಲಾಸಿ ಸಾಮಾಗ್ರಿಗಳನ್ನು ಖರೀದಿಸುವುದು ಖರ್ಚಿಗೆ ದಾರಿಯಾಗಲಿದೆ. ನಿಮ್ಮ ಹೊಸ ಆಸೆ ಆಕಾಂಕ್ಷೆಗಳು ಗುರಿಗಳನ್ನು ಬದಲಿಸಬಹುದು. ಮದುವೆಯ ವಿಷಯಗಳು ಪ್ರಸ್ತಾಪಕ್ಕೆ ಬರಲಿದೆ. (ಶುಭ ಸಂಖ್ಯೆ 7) [ಸುಬ್ರಹ್ಮಣ್ಯ ಸ್ವಾಮಿಗೆ ಎಳನೀರು ಅಭಿಷೇಕ ಮಾಡಿಸಿ]

**ಮಕರ :** ನಿಮ್ಮ ಒಡನಾಡಿಗಳ ಪ್ರೀತಿ ವಿಶ್ವಾಸ ಸಹಕಾರದಿಂದ ಕಾರ್ಯವನ್ನು ಸುಲಭದಲ್ಲಿ ಸಾಧಿಸುವಿರಿ. ನಿಮ್ಮ ಹೆಜ್ಜೆ ಬಿರುಸಾಗಿ ಸಾಗಲಿದೆ. ಕೆಲಸದಲ್ಲಿ ಪ್ರಶಂಸೆ ಸಿಗುವುದು. (ಶುಭ ಸಂಖ್ಯೆ 6) [ಶಿವನಿಗೆ ರುದ್ರಾಭಿಷೇಕ ಮಾಡಿಸಿ]



**ಕುಂಭ :** ವಿದ್ಯಾರ್ಥಿಗಳಿಗೆ ತಮ್ಮ ಶೈಕ್ಷಣಿಕ ವಿಚಾರದಲ್ಲಿ ಮರೆಯಲಾಗದ ಒಂದು ಕಹಿ ಘಟನೆ ನಡೆಯಬಹುದು. ರಾಮನಾಮ ಪಠಣೆಯಿಂದ ಶುಭವಾಗುವುದು. ವಾಹನ ಚಾಲನೆ ಕಾರ್ಯದಲ್ಲಿ ಯಾವುದೇ ಆತುರವು ಒಳ್ಳೆಯದಲ್ಲ. (ಶುಭ ಸಂಖ್ಯೆ 4) [ರಾಮ ಭಜನೆ ಮಾಡಿ]

**ಮೀನ :** ನಿಮ್ಮ ಕನಸುಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯವಾಗುವುದು. ದಿನಚರಿಯ ಬದಲಾವಣೆಗೆ ಗಮನ ನೀಡಿರಿ. ವರ್ಗಾವಣೆ ರದ್ದು ಮಾಡಿಸಿಕೊಳ್ಳುವಲ್ಲಿ ಯಶಸ್ವಿ ಯಾಗುವಿರಿ. (ಶುಭ ಸಂಖ್ಯೆ 1) [ಅಯ್ಯಪ್ಪ ಸ್ವಾಮಿಗೆ ಜೇನುತುಪ್ಪ ಅಭಿಷೇಕ ಮಾಡಿಸಿ]

(ಶ್ರೀ ಶ್ರೀಪತಿ ಭಟ್ ಆಚಾರ್ಯರು ಪೇಜಾವರ ಶ್ರೀಗಳ ಅಧೀನದಲ್ಲಿ ಅವರ ವಿದ್ಯಾಪೀಠ ಆಶ್ರಮದಲ್ಲಿ ಅಧ್ಯಯನ ಮುಗಿಸಿದ್ದಾರೆ. ಅವರಿಗೆ ಜ್ಯೋತಿಷ್ಯ ಶಾಸ್ತ್ರದಲ್ಲಿ 20 ವರ್ಷಗಳ ಅನುಭವವಿದೆ. ವೇದ, ಉಪನಿಷತ್, ಜ್ಯೋತಿಷ್ಯದ ಪ್ರಕಾರಗಳನ್ನು ಚೆನ್ನಾಗಿ ಅಧ್ಯಯನ ಮಾಡಿ 20 ವರ್ಷಗಳ ಅನುಭವದಲ್ಲಿ ಬಡಬಗ್ಗರಿಗೆ ಸಹಾಯ ಮಾಡುತ್ತಾ ಇದ್ದಾರೆ. ಹನುಮಂತ ನಗರದ ಮಾರುತಿ ಸರ್ಕಲ್‌ನಲ್ಲಿ ಇರುವ ಬಲಮುರಿ ಗಣಪತಿ ದೇವಸ್ಥಾನದ ಪ್ರಧಾನ ಅರ್ಚಕರಾಗಿಯೂ 25 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಸಂಪರ್ಕ ಸಂಖ್ಯೆ : 99000 00198)


UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

*ADVT.*

# NEW MEMBERS LIST

| No. | Name | Native |
|---|---|---|
| LM - 1718 | Girish Avadhani - Dombivili | Karki |
| LM - 1719 | Joisa Ramachandra H. - Bhandup | Sullia |
| LM - 1720 | Suresha Bellamoole - Ulve | Kasaragod |
| LM - 1721 | Chinmayakrishna Shastry - N.M. | Puttur |
| LM - 1722 | Vinay Shankarling - Hubli | Gokarna |
| LM - 1723 | Kedar M. Hegde - Goregaon | Honnavar |
| LM - 1724 | Siddhant N. Kodlekere - Pune | Gokarna |
| LM - 1725 | Savitha N. Kodlekere - Pune | Gokarna |
| LM - 1726 | Hemavati Govind Hegde - Mulund | Gudeangadi |
| LM - 1727 | Saroja Kuppayya Hegde - Thane | Baad- Kumta |
| LM - 1728 | Vijaya Krishna Bhat - Andheri | Guddebal |
| LM - 1729 | Shrikant G. Hosabale - Kharghar | Kansur |
| LM - 1730 | Shashank D. Hasyagar - Karki | Karki |
| LM - 1731 | Radhika S. Bhat - Belkhand | Sirsi |
| PT - 140 | S. M. Hegde - Badlapur | Siddapur |

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details.

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to 'Havyaka Welfare Trust' qualify for tax deduction under section 80 (G).**

## ಅತೀ ಅಗ್ಗ

**- ವಿಡಂಬಾರಿ**

ನಾರಿ ದೇವತೆಯೆಂಬ ಭಾರತದಿ ಗೊತ್ತೆ
ತೀರಾ ಅಗ್ಗವು ಎರಡು ಆಗಿಹುದು ಪತ್ತೆ
ಈ ನಮ್ಮ ನಾರಿಯರ ಹಿರಿದಾದ ಮಾನ
ಇನ್ನೊಂದು ಇವರದೇ ಆಗಿರುವ ಪ್ರಾಣ

✶✶✶

## ಹೃದಯ ಸಿರಿ

**- ವಿಡಂಬಾರಿ**

ಮನೆ ಒಳಗೆ ಮಾನವತೆ ನೆಲೆಸಿದರೆ ಕೇಳಿ?
ಆ ಮನೆಯ ಭಾಗ್ಯಕ್ಕೆ ಎಣೆಯುಂಟೆ ಹೇಳಿ?
ಮನದ ಕಸ ಹಾರಿಸಲು ಹೃದಯ ಸಿರಿಯೆಂಬ
ತಂಗಾಳಿ ಬೀಸುವುದು ಆ ಮನೆಯ ತುಂಬ

✶✶✶

*PAGE DONATED BY :* ***SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

**As a part of 60th** Year Diamond Jubilee Celebration Plan we have launched new initiative **Havyaka Helping Hand – Locals for Locals** during our Diamond Jubilee Launch Program on 10th March, 2024

**Purpose -** If any emergency arises or medical / education assistance is required (except financial) for members in mumbai they can contact any of the following members.

# HAVYAKA HELPING HAND - LOCALS FOR LOCALS

| **Virar to Dahisar** | **Mobile Number** |
|---|---|
| Shashikala Hegde - Dahisar | 918779136582 |
| Rokesh Hegde - Dahisar | 919869396480 |
| K. C. Hegde - Borivli | 919869074115 |
| U. T. Krishnamurthy - Virar | 919158018555 |
| Tanuja Hegde - Borivli | 918169515822 |
| Prashant Bhat - Vasai | 919323791720 |

| **Borivli to Andheri** | **Mobile Number** |
|---|---|
| Sanjay Bhat - Andheri | 919869035267 |
| Prakash Bhat - Andheri | 919867215936 |
| K. S. Bhat - Andheri | 919821110142 |
| Tejas Hegde - Andheri | 918424011618 |
| Chidanand Bhagwat - Powai | 919004638908 |
| Narayan Akadas - Kandivli | 919821211894 |
| Shivram Marigoli - Borivli | 919820130850 |
| Asha Marigoli - Borivli | 919004034141 |
| Roopa Bhat - Kandivli Charkop | 919821297562 |
| Tanuja Bhat - Borivli | 919820125830 |
| Santosh Bhat - Charkop | 919819363402 |
| Usha Kodlekere - Kandivli | 919969832171 |
| Ishwari Bhat - Andheri | 919158064444 |
| Shanta Bhat - Kandivli | 917208171617 |

| **Vileparle to Churchgate/Colaba** | **Mobile Number** |
|---|---|
| Shivkumar Bhagwat - Prabhadevi | 919820154378 |
| R. P. Hegde - Kalina | 919324205262 |
| Amita Bhagwat - Prabhadevi | 919819324284 |
| Anant Bhat - Bandra | 919892623091 |

| **Vashi to Panvel** | **Mobile Number** |
|---|---|
| Umesh Maskeri - Vashi | 919930178352 |
| S. V. Shastri - Panvel | 919322881656 |
| Bharati Hegde - Jui Nagar | 919137428330 |
| Dr. Kumar Bhat - Panvel | 918928689728 |
| Mahesh Hegde - Kharghar | 919096007396 |
| Chandrashekar Joshi - Khargar | 918879590011 |

| **Chembur to Kalwa - Airoli** | **Mobile Number** |
|---|---|
| Vishnu Bhagwat - Thane | 919819798245 |
| G. V. Hegde - Mulund | 919930156877 |
| Vasant Bhat - Thane | 919867307715 |
| R. V. Joshi - Thane | 918657587138 |
| Prakash Hegde - Thane | 919930982060 |
| Prakash Rao - Vikhroli | 919004689538 |
| Nagraj Bhat - Thane | 917506248599 |
| Ganesh Bhat - Mulund | 919969192325 |
| Ramana Bhat - Mulund | 919820158256 |


| **Dombivli and beyond** | **Mobile Number** |
|---|---|
| N. R. Hegde - Dombivli | 919820332240 |
| Vighneshwar Gaonkar - Palava | 919481986517 |
| M. N. Markande - Dombivli | 919833615085 |
| N. K. Hegde - Dombivli | 918850797296 |
| Umesh Hegde - Dombivli | 918080868649 |
| D. V. Bhat - Dombivli | 919372339050 |
| Ramkrishna Chatra - Dombivli | 918850448009 |
| Hema Hegde - Dombivli | 917715950112 |
| S. G. Bhat - Badlapur | 919869713696 |
| G. V. Hegde - Dombivli | 919167434626 |
| Shivanand Bhat - Dombivli | 919819908248 |
| Akshay Hegde - Chembur | 919920456216 |
| Vipin Bhat - Ghatkopar | 919869041186 |
| Praveen Rao - Thane | 919322694421 |

*PAGE DONATED BY : **SHRI A. K. BHAT, CHITRIGI & FAMILY***


As a part of the 60th year Celebration Plan we have initiated Patron Drive program during our Diamond Jubilee Launch Day on 10th March, 2024. We have received great response for this initiative and following have upgraded / newly enrolled as Patrons of our Trust.




**Jayalaxmi Bhatshikar**
**Ghatkopar**



**Shantkumar G. Hegde**
**Chembur**



**Ganapati S. Bhat**
**Vikhroli**




**Vipin K. Bhat**
**Ghatkopar**



**Savita Prakash Rao**
**Vikhroli**



**Tejas Prakash Rao**
**Vikhroli**



**S. M. Hegde**
**Badlapur**



**Ishwari Prakash Bhat**
**Andheri**

# ಸಂಕ್ಷಿಪ್ತ ಸುದ್ದಿಗಳು

## ಮುಂಬಯಿ ವಿಶ್ವವಿದ್ಯಾಲಯ ಕನ್ನಡ ಎಂ. ಎ. ಅಧ್ಯಯನಕ್ಕೆ ಅರ್ಜಿ ಆಹ್ವಾನ

ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದಲ್ಲಿ ಎಂ. ಎ. ತರಗತಿ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಮುಂಬಯಿ ವಿಶ್ವವಿದ್ಯಾಲಯ ಕನ್ನಡ ವಿಭಾಗದ 2024-25ನೇ ಶೈಕ್ಷಣಿಕ ಸಾಲಿನ ಕನ್ನಡ ಎಂ. ಎ. (ಸೆಮಿಸ್ಟರ್, ರೆಗ್ಯೂಲರ್) ಪ್ರಥಮ ವರ್ಷ ಅಧ್ಯಯನಕ್ಕೆ ಬಿ.ಎ., ಬಿ.ಕಾಂ, ಬಿ.ಎಸ್ಸಿ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದು.

ತರಗತಿಗೆ ಹಾಜರಾತಿ ಕಡ್ಡಾಯವಿದ್ದು, ಸರ್ವ ಪ್ರಥಮರಾದ ವಿದ್ಯಾರ್ಥಿಯೊಬ್ಬರಿಗೆ ಎಂ. ಬಿ. ಕುಕ್ಯಾನ್ ಚಿನ್ನದ ಪದಕವನ್ನು ಸಹ ವಿಶ್ವವಿದ್ಯಾಲಯದಿಂದ ನೀಡಲಾಗುತ್ತದೆ. ಆಸಕ್ತ ಅರ್ಹ ಅಭ್ಯರ್ಥಿಗಳು ಸ್ವಲಿಖಿತ ಅರ್ಜಿಯನ್ನು ಹಾಗೂ ಎಲ್ಲ ದಾಖಲೆಗಳ ಪ್ರತಿಯನ್ನು Dr. G. N. Upadhya, Head, Department of Kannada, University of Mumbai, Ranade Bhavan, Vidyanagari, Santacruz (East), Mumbai - 400 098. ಈ ವಿಳಾಸಕ್ಕೆ ಜೂ. 12 ರೊಳಗೆ ಕಳುಹಿಸಬಹುದು. ಅಥವಾ ವಿಶ್ವವಿದ್ಯಾಲಯದ Email :kannadadepartment@gmail.com ಇಮೇಲ್ ಐಡಿಯನ್ನು ಬಳಸಿ ಪ್ರವೇಶವನ್ನು ಪಡೆಯಬಹುದು ಎಂದು ಕನ್ನಡ ವಿಭಾಗ ಮುಂಬಯಿ ವಿ.ವಿ. ಮುಖ್ಯಸ್ಥರಾದ ಡಾ. ಜಿ. ಎನ್. ಉಪಾಧ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'Havyaka Sandesha' June 2024

***RNI NO. MAHBIL / 2000 / 746***
***Postal Registration No. MCN/161***
***WPP License No. MR / Tech / WPP-130 / North***

| | | |
|---|---|---|
| ***Posted at Mumbai Patrika Channel Stg. Office Mumbai - 400 001***<br>**Date of Publication : 1st of every month** | **REGISTERED NEWSPAPER** | **Date of Posting :**<br>**2nd, 3rd of every month** |
| ***If undelivered, please return to :***<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098.<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Vasant Bhat<br>Secretary Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | **To,** | |


## ಗಣೇಶ್ ಭಟ್ ನೇಮಕ



ರೋಟರಿ ಫೌಂಡೇಶನ್‌ನ ಜಾಗತಿಕ ಮಟ್ಟದ ಸಂಶೋಧನೆ ಮತ್ತು ಮೌಲ್ಯಮಾಪಕರಾಗಿ ರೊಟೇರಿಯನ್ ಗಣೇಶ್ ಭಟ್ ನೇಮಕಗೊಂಡಿದ್ದಾರೆ. ರೋಟರಿ ಧಾರವಾಡ ಜಿಲ್ಲೆಯ ಮಾಜಿ ಗವರ್ನರ್ ಗಣೇಶ್ ಭಟ್ ಅವರನ್ನು ಈ ವಿಭಾಗದ ಸಂಯೋಜಕರಾದ ಲಿಜ್ಜಿ ಕಿನೆಕ್ ನೇಮಕ ಮಾಡಿದ್ದಾರೆ. 2025-26ನೇ ಸಾಲಿಗೆ ಈ ಜವಾಬ್ದಾರಿ ನಿರ್ವಹಿಸಲಿರುವ ಗಣೇಶ್ ಭಟ್, ಪ್ರಸಕ್ತ ಸಾಲಿನ ನವೆಂಬರ್‌ನಲ್ಲಿ ಫಿಲಿಫೈನ್ಸ್‌ನ ಮಕಾತಿಯಲ್ಲಿ ಅಗತ್ಯ ತರಬೇತಿ ಪಡೆಯಲಿದ್ದಾರೆ.

ಗಣೇಶ್ ಭಟ್ ಅವರು ರೋಟರಿ ಫೌಂಡೇಶನ್ ವತಿಯಿಂದ ಜಗತ್ತಿನ ವಿವಿಧ ಭಾಗಗಳಲ್ಲಿ ನೀರು, ನೈರ್ಮಲ್ಯ, ಸ್ವಚ್ಛತೆ, ಸಂತುಲಿತ ಬೆಳವಣಿಗೆ ಸಂಬಂಧ ಅನುಷ್ಠಾನಗೊಳಿಸಿರುವ ಯೋಜನೆಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಿದ್ದಾರೆ. ಜತೆಗೆ ಅಗತ್ಯ ಸುಧಾರಣೆ ಸಂಬಂಧ ಸಲಹೆ, ಸೂಚನೆ ನೀಡಲಿದ್ದಾರೆ. ಇವರು ಮೂಲತಃ ಹೊನ್ನಾವರ ತಾಲೂಕಿನ ಮಾಡಗೇರಿಯವರು. ವೃತ್ತಿಯಲ್ಲಿ ಸಿವಿಲ್ ಇಂಜಿನಿಯರ್ ಆಗಿದ್ದಾರೆ.

## Obiturary



Industrialist **Shri I. K. Bhat** (84), a native of Karki, passed away on 13th May, 2024 at Bangalore due to heart attack. He was Hon. Secretary, Havyaka, Mumbai during 1975. He played a pivotal role in raising of funds for Havyaka, Mumbai.

He shifted to Bangalore in 1982 and started his own business. He worked deligently for the welfare of Rotary Udyog, Bangalore and was a great follower of Gurupeetha, Ramchandrapura Mutt. He has donated selflessly for the purpose of education and building fund of Ramchandrapura Mutt.

He is survived by his wife Sumana Bhat, daughters, son, grandchildren and great grandchildren.

***We pray for the eternal peace of the departed soul.***

## Achievement



**Kumar Sandesh,** S/o. Smt. Veena and Shri Arunkumar Joshi, Sirsi scored 97.4% in SSLC Board exam held in March 2024.

★ ★ ★



**Adarsh Bhat,** S/o. CA Vinay Bhat and Smt Aparna Bhat completed his M.S. in Media Innovation and Data Communication from Northeastern University Boston USA in May and has joined Amazon in Boston.

★ ★ ★



**Kumari Anusha,** D/o. - Smt. Shweta and Shri Gurudevprasad Hegde, Mira Road, secured 92.2% (Best of five 94.6%) in CBSE (10th) Exam. She is learning Bharatnatyam Visharada and Carnatic Music (Senior).

★ ★ ★

***We wish them all the best and bright future.***